	ಒಟ್ಟು	9969	9310	659

ಬಾಕಿ ಇರುವ ರೂ.659/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮಾ ಮಾಡಲು ತಿಳಿಸಿದೆ.

35) ವೇತನ ಬಟವಾಡೆ ಪುಸ್ತಕದಲ್ಲಿನ ನ್ಯೂನತೆಗಳು:–

2012–13ನೇ ಸಾಲು ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಇರುತ್ತದೆ.

1) ಮಾಹೆಯ ಭಾಗಶಃ ದಿನಗಳಿಗೆ ವೇತನ ಪಾವತಿಸುವಾಗ ವೇತನದ ಸಂಪೂರ್ಣ ವಿವರಗಳನ್ನು ಹೆಸರಿನ ಕೆಳಭಾಗದಲ್ಲಿ ದಾಖಲಿಸಿ ಸಂಬಂಧಪಟ್ಟ ಕಾಲಂಗಳಲ್ಲಿ ಭಾಗಶಃ ಮೊಬಲಗನ್ನು ದಾಖಲಿಸಬೇಕಾಗಿದ್ದು, ಈ ಕ್ರಮ ಅನುಸರಿಸಿರುವುದಿಲ್ಲ.

2) ವೇತನ ಬಟವಾಡೆ ಮಾಡಿದ ಬಗ್ಗೆ ವೇತನ ಪುಸ್ತಕದಲ್ಲಿ ಅಧಿಕಾರಿಗಳಿಂದ ದೃಢೀಕರಣಗಳನ್ನು ದಾಖಲಿಸುತ್ತಿಲ್ಲ.

3) ಪೂರಕ ವೇತನ ಬಿಲ್ಲುಗಳನ್ನು ತಯಾರಿಸುವಾಗ ಬಿಲ್ಲಿನ ಸಂಪೂರ್ಣ ವಿವರಗಳನ್ನು ದಾಖಲಿಸುತ್ತಿಲ್ಲ ಮತ್ತು ಮೂಲ ಬಿಲ್ಲಿನಲ್ಲಿ ಪೂರಕ ಬಿಲ್ಲನ್ನು ಡ್ರಾ ಮಾಡಿರುವ ವೇತನದ ಪುಸ್ತಕದ ಪುಟ ಸಂಖ್ಯೆ ದಿನಾಂಕ ವಿವರಗಳನ್ನು ನಮೂದಿಸತಕ್ಕದ್ದು.

ಈ ಮೇಲಿನ ನ್ಯೂನತೆಗಳನ್ನು ಹಿಂದಿನ ಸಾಲಿನ ವರದಿಯಲ್ಲಿ ಸೂಚಿಸಿದ್ದರೂ ಸಹ ಪಾಲನೆ ಮಾಡಿರುವುದಿಲ್ಲ.

36) ರಜಾ ವೇತನ ವಂತಿಕೆ ಮತ್ತು ನಿವೃತ್ತಿ ವೇತನ ವಂತಿಕೆಯ ಬಗ್ಗೆ:–

ಕರ್ನಾಟಕ ನಾಗರೀಕ ಸೇವಾ ನಿಯಮ 425 ಮತ್ತು 427ರ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯದಲ್ಲಿ ನಿಯೋಜನೆ ಮೇರೆಗೆ ಅನ್ಯಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ ಅಧಿಕಾರಿಗಳ ಮತ್ತು ಸಿಬ್ಬಂದಿಗಳ 2012–13ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ರಜಾ ವೇತನ ಮತ್ತು ನಿವೃತ್ತಿ ವೇತನ ವಂತಿಕೆಯ ವಿವರಗಳು ಇಂತಿದೆ.

ಕ್ರ ಸಂ	ಅಧಿಕಾರಿ/ಸಿಬ್ಬಂದಿ ಹೆಸರು/ಪದನಾಮ	ಅವಧಿ	2012–13ನೇ ಸಾಲು ಪಡೆದಿರುವ ಮೂಲ ವೇತನ (ರೂ.ಗಳಲ್ಲಿ)	ರಜಾ ವೇತನವಂತಿಕೆ ಶೇ.11 (ರೂ.ಗಳಲ್ಲಿ)	ನಿವೃತ್ತಿ ವೇತನ ವಂತಿಕೆ ಶೇ.12.5 (ರೂ.ಗಳಲ್ಲಿ)

1	ಶ್ರೀ.ಹೆಚ್.ಎಸ್.ಶಿವರಾಮು ಆಯುಕ್ತರು	25–6–12 ರಿಂದ 31–3–13	300667	33074	37584
2	ಶ್ರೀ.ಟಿ.ನಿಸಾರ್ಅಹ್ಮದ್, ನಗರಯೋಜನಾ ಸಹಾಯಕರು.	1–4–12 ರಿಂದ 14–8–13	162000	17820	20250
3	ಶ್ರೀ.ಕೆ.ಎಂ.ನಾಗರಾಜು ಸಹಾಯಕಕಾರ್ಯಪಾಲಕ ಇಂಜಿನಿಯರ್	1–4–12 ರಿಂದ 22–11–12	446600	49126	55825
4	ಶ್ರೀ.ಎಂ.ಕೆ.ತಮ್ಮಣ್ಣ, ಸಹಾಯಕ ಇಂಜಿನಿಯರ್	1–4–12 ರಿಂದ 31–3–13	393600	43296	49200
5	ಶ್ರೀ.ಪಿ.ರಾಮೇಗೌಡ, ಬೆರಳಚ್ಚುಗಾರ	1–4–12 ರಿಂದ 14–8–12	135329	14886	16916
6	ಶ್ರೀ.ಪಿ.ವಸಂತಕುಮಾರ್, ರಾಜಸ್ವ ನೀರೀಕ್ಷಕರು	1–4–12 ರಿಂದ 27–6–12	24360	2680	3045
	ಒಟ್ಟು		1462556	160882	182820

2012–13ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾಗಿದ್ದು, ವಿವರ ಕೆಳಗಿನಂತಿದೆ.

37)ರಜಾ ವೇತನ ವಂತಿಕೆ:–

ದಿನಾಂಕ:1–4–2012ಕ್ಕೆ ಪ್ರಾರಂಭಿಕ ಶಿಲ್ಕು	**120514**
2012–13ನೇ ಸಾಲಿನಲ್ಲಿ ಜಮಾ ಮಾಡಬೇಕಾದ ಮೊತ್ತ	**160882**
ಒಟ್ಟು	**281396**
2012–13ನೇ ಸಾಲಿನಲ್ಲಿ ಜಮಾ ಮಾಡಿರುವ ಮೊತ್ತ	**–**
ಬಾಕಿ	**281396**

38)ನಿವೃತ್ತಿ ವೇತನ ವಂತಿಕೆ ಬಗ್ಗೆ:–

ದಿನಾಂಕ:1–4–2012ಕ್ಕೆ ಪ್ರಾರಂಭಿಕ ಶಿಲ್ಕು	**136901**
2012–13ನೇ ಸಾಲಿನಲ್ಲಿ ಜಮಾ ಮಾಡಬೇಕಾದ ಮೊತ್ತ	**182820**
ಒಟ್ಟು	**319721**
2012–13ನೇ ಸಾಲಿನಲ್ಲಿ ಜಮಾ ಮಾಡಿರುವ ಮೊತ್ತ	**–**
ಆಖೈರು ಶಿಲ್ಕು	**319721**

<u>ಪ್ರಾಧಿಕಾರದ ಸಿಬ್ಬಂದಿಗಳ ನಿವೃತ್ತಿ ವೇತನ ವಂತಿಕೆಯ ಬಗ್ಗೆ:–</u>

ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ 2012–13ನೇ ಸಾಲು ಸರ್ಕಾರಕ್ಕೆ ಪಾವತಿಸಬೇಕಾದ ನಿವೃತ್ತಿ ವೇತನ ವಂತಿಕೆಯ ವಿವರಗಳು ಕೆಳಕಂಡಂತಿವೆ.

ಕ್ರಸಂ	ನೌಕರರ ಹೆಸರು ಮತ್ತು ಪದನಾಮ	2012–13ನೇ ಸಾಲಿನಲ್ಲಿ ಪಡೆದಿರುವ ಮೂಲವೇತನ (ರೂ.ಗಳಲ್ಲಿ)	ನಿವೃತ್ತಿ ವೇತನ ವಂತಿಕೆ ಶೇ.12.5% (ರೂ.ಗಳಲ್ಲಿ)
1	ಹೆಚ್.ಕೆ.ನಾಗರಾಜ, ಪ್ರದಸ	254100	31763
2	ಎಂ.ಎಸ್.ಕಿಶೋರ್‌ಬಾಬು, ದ್ವಿದಸ	212650	26581
3	ಎಂ.ಬಿ.ನಾಗೇಂದ್ರ, ದ್ವಿದಸ	157300	19663
4	ವಿದ್ಯಾಪಿಳ್ಳೈ, ದ್ವಿದಸ	152500	19063
5	ಜೆ.ಕುಮಾರ್, ವಾಹನಚಾಲಕ	193000	24125
6	ಎಂ.ಆರ್.ಪ್ರಕಾಶ್, 'ಡಿ'ಗ್ರೂಪ್	194200	24275
7	ಎನ್.ದೇವರಾಜ್,	153400	19175

	'ಡಿ'ಗ್ರೂಪ್		
8	ಕೆ.ಕರಿಯಪ್ಪ, 'ಡಿ'ಗ್ರೂಪ್	153400	19175
9	ಎಸ್.ಸತೀಶ್, 'ಡಿ'ಗ್ರೂಪ್	129400	16175
	ಒಟ್ಟು	1599950	199995

ಪ್ರಾರಂಭಿಕ ಶಿಲ್ಕು	102483
2012–13ನೇ ಸಾಲಿನಲ್ಲಿ ಜಮಾ	199995
ಒಟ್ಟು	302478
ಜಮಾ	–
ಆಖೈರು ಶಿಲ್ಕು	302478

ಆಖೈರು ಶಿಲ್ಕುನ್ನು ಸರ್ಕಾರಕ್ಕೆ ಜಮಾ ಮಾಡಲು ತಿಳಿಸಿದೆ

39)ಸೇವಾ ಪುಸ್ತಕದ ನ್ಯೂನತೆಗಳ ಬಗ್ಗೆ:–

ಪ್ರಾಧಿಕಾರದ ನೌಕರರ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

1	ಹೆಚ್.ಕೆ.ನಾಗರಾಜ, ಪ್ರದಸ	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
2	ಎಂ.ಎಸ್.ಕಿಶೋರ್‌ಬಾಬು, ದ್ವಿದಸ	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
3	ಎಂ.ಬಿ.ನಾಗೇಂದ್ರ, ದ್ವಿದಸ	ಹುಟ್ಟಿದ ದಿನಾಂಕ ಮತ್ತು ವಿದ್ಯಾರ್ಹತೆ ವಿವರ ದಾಖಲು ಮಾಡಿರುವುದಿಲ್ಲ.
4	ವಿದ್ಯಾಪಿಳ್ಳೈ, ದ್ವಿದಸ	ವಿದ್ಯಾರ್ಹತೆ ವಿವರ ದಾಖಲು ಮಾಡಿಲ್ಲ.
5	ಜೆ.ಕುಮಾರ್, ವಾಹನಚಾಲಕ	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
6	ಎಂ.ಆರ್.ಪ್ರಕಾಶ್, 'ಡಿ'ಗ್ರೂಪ್	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
7	ಎನ್.ದೇವರಾಜ್, 'ಡಿ'ಗ್ರೂಪ್	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
8	ಕೆ.ಕರಿಯಪ್ಪ, 'ಡಿ'ಗ್ರೂಪ್	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.
9	ಎಸ್.ಸತೀಶ್, 'ಡಿ'ಗ್ರೂಪ್	ಹುಟ್ಟಿದ ದಿನಾಂಕವನ್ನು ಅಧಿಕಾರಿಗಳಿಂದ ದೃಢೀಕರಿಸಿಲ್ಲ.

ಮೇಲಿನಂತೆ ಸೇವಾ ಪುಸ್ತಕದ ನ್ಯೂನತೆಗಳನ್ನು ಸರಿಪಡಿಸಲು ತಿಳಿಸಿದೆ.

<u>40)ವಾಹನ ವಿಮೆ ನವೀಕರಣ ಬಗ್ಗೆ:–</u>

ವಾಹನ ಸಂಖ್ಯೆ KA–11, M.B–1199ರ ಕೆ.ಜಿ.ಐ.ಡಿ ಪಾಲಿಸಿ ಸಂಖ್ಯೆ:116408ನ್ನು ನವೀಕರಣ ಮಾಡಿಸಿದ್ದು, ದಿನಾಂ:11–10–2013 ರವರೆಗೆ ಚಾಲ್ತಿಯಲ್ಲಿರುತ್ತದೆ.

ವಾಹನ ಸಂಖ್ಯೆ KA–11, MB–663 ಕೆ.ಜಿ.ಐ.ಡಿ ಪಾಲಿಸಿ ಸಂಖ್ಯೆ:103492ನ್ನು ನವೀಕರಿಸಿದ್ದು, ದಿನಾಂಕ:11–10–2013ರವರೆಗೆ ಚಾಲ್ತಿಯಲ್ಲಿರುತ್ತದೆ.

<u>41)ವಾಹನ ದಿನಚರಿ ಬಗ್ಗೆ:–</u>

ವಾಹನಗಳ ದಿನಚರಿಯನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

1)ಪ್ರತಿ ನಿತ್ಯ ವಾಹನವು ಚಲಿಸಿದಾಗ ವಾಹನದಲ್ಲಿ ಪ್ರಯಾಣಿಸಿದ ಅಧಿಕಾರಿಗಳ ಸಹಿ ಪಡೆದಿರುವುದಿಲ್ಲ.

2)ಪ್ರತಿ ಮಾಹೆ ಅಂತ್ಯಕ್ಕೆ ವಾಹನಗಳ ದಿನಚರಿಯಲ್ಲಿ ಫೋಷ್ಪಾರೆ ನಮೂದಿಸಿ, ಅಧಿಕಾರಿಗಳ ಸಹಿಯೊಂದಿಗೆ ದೃಢೀಕರಿಸಲು ತಿಳಿಸಿದೆ.

<u>42) ವಿವೇಕಾನಂದ ಬಡಾವಣೆಯಲ್ಲಿ 19 ಮೂಲೆ ಮತ್ತು ವಾಣಿಜ್ಯ ನಿವೇಶನಗಳನ್ನು ಹರಾಜು ಮಾಡಿರುವ ಬಗ್ಗೆ:–</u>

2012–13ನೇ ಸಾಲಿನಲ್ಲಿ ವಿವೇಕಾನಂದ ನಗರ ಬಡಾವಣೆಯಲ್ಲಿ 19 ಮೂಲೆ ಮತ್ತು ವಾಣಿಜ್ಯ ನಿವೇಶನಗಳನ್ನು ಹರಾಜು ನಡೆಸಿದ್ದು, ಒಟ್ಟು ಮೊತ್ತ ರೂ.3,33,09,079=00ಗಳನ್ನು ವಸೂಲಿಸಿದೆ. ಹರಾಜು ಬಿಡ್ಡಿನ ಹಣವನ್ನು 07 ಮಂದಿ ನಿವೇಶನ ಬಿಡ್ದುದಾರರು ನಿಗಧಿತ ವೇಳೆಯಲ್ಲಿ ಬಿಡ್ಡಿನ ಮೊಬಲಗನ್ನು ಪಾವತಿಸಿದ್ದು, ಇನ್ನುಳಿದ 12 ಮಂದಿ ನಿವೇಶನ ಬಿಡ್ದುದಾರರಿಗೆ ನಿಗಧಿತ ವೇಳೆಯಲ್ಲಿ ಪಾವತಿ ಮಾಡದ ಹಿನ್ನಲೆಯಲ್ಲಿ ಶೇ.18ರಂತೆ ವಾರ್ಷಿಕ ಬಡ್ಡಿಯನ್ನು ವಿಧಿಸಿ ವಸೂಲಿಸಿದೆ. ವಿವರವನ್ನು ಅನುಬಂಧ–6 ರಲ್ಲಿ ನೀಡಿದೆ.

43)ನಾಗರೀಕ ಸೌಕರ್ಯ (ಸಿ.ಎ) ನಿವೇಶನ ಹಂಚಿಕೆ ಬಗ್ಗೆ:–

2012–13ನೇ ಸಾಲಿನಲ್ಲಿ ವಿವೇಕಾನಂದ ನಗರ ಬಡಾವಣೆಯಲ್ಲಿ ನಾಗರೀಕ ಸೌಕರ್ಯ (ಸಿ.ಎ) ನಿವೇಶನ ಹಂಚಿಕೆ ಮಾಡಿರುವ ಮತ್ತು ನಿವೇಶನಕ್ಕಾಗಿ ಹಣ ಪಾವತಿಸಿರುವ ವಿವರವನ್ನು ಅನುಬಂಧ–7ರಲ್ಲಿ ವಿವರಿಸಿದೆ.

44) ಮೂಲೆ ಮತ್ತು ವಾಣಿಜ್ಯ ನಿವೇಶನಗಳನ್ನು ಹರಾಜು ಮಾಡಿದ್ದು, ಬಾಕಿ ಹಣವನ್ನು ನಿಗಧಿತ ವೇಳೆಯಲ್ಲಿ ಪಾವತಿ ಮಾಡದಿರುವ ನಿವೇಶನ ಬಿಡ್ದುದಾರರ ಬಗ್ಗೆ:–

2012–13ನೇ ಸಾಲಿನಲ್ಲಿ ವಿವೇಕಾನಂದ ನಗರ ಬಡಾವಣೆಯಲ್ಲಿ ಒಟ್ಟು 06 ಮೂಲೆ ಮತ್ತು ವಾಣಿಜ್ಯ ನಿವೇಶನಗಳನ್ನು ಹರಾಜು ಮಾಡಿದ್ದು, ನಿವೇಶನ ಬಿಡ್ದುದಾರರು ಬಾಕಿ ಹಣವನ್ನು ನಿಗಧಿತ ವೇಳೆಯಲ್ಲಿ ಪಾವತಿ ಮಾಡದಿರುವುದರಿಂದ ಅವರಿಗೆ ಮಂಜೂರು ಮಾಡಲಾಗಿರುವ ನಿವೇಶನಗಳನ್ನು ರದ್ದುಪಡಿಸಿ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ 1991ರಂತೆ ಮೂಲೆ ನಿವೇಶನ ಹಾಗೂ ವಾಣಿಜ್ಯ ನಿವೇಶನಗಳ ನಿಯಮ 4 (ಡಿ) ರನ್ವಯ ಮರು ಹರಾಜಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರದ ಪತ್ರ ಸಂಖ್ಯೆ/ನಅಇ/253/ಮೈಅಪ್ರಾ/ದಿನಾಂಕ:18–06–2013ರ ಪತ್ರದಲ್ಲಿ ಆದೇಶಿಸಿದ್ದು, ಅದರಂತೆ ಕ್ರಮ ವಹಿಸಿ ಕೂಡಲೇ ಮರು ಹರಾಜಿಗೆ ಸೂಕ್ತ ಕ್ರಮ ವಹಿಸಲು ವರದಿಯು ಸೂಚಿಸಿದೆ. ವಿವರವನ್ನು ಅನುಬಂಧ–8ರಲ್ಲಿ ವಿವರಿಸಿದೆ.

45)ಅಂದಾಜು ಪಟ್ಟಿ ಮಂಜೂರಾತಿ ಹಾಗೂ ಗುತ್ತಿಗೆ ಕರಾರು ವಹಿಗಳನ್ನು ನಿರ್ವಹಿಸದಿರುವ ಬಗ್ಗೆ:–

2012–13ನೇ ಸಾಲಿನಲ್ಲಿ ಕಾಮಗಾರಿಗಳ ತುಂಡು ಮತ್ತು ಟೆಂಡರ್ ಕಾಮಗಾರಿಗಳನ್ನು ವಿವಿಧ ಗುತ್ತಿಗೆದಾರರಿಗೆ ವಹಿಸಿ ನಿರ್ವಹಿಸಲಾಗಿದೆ. ಆದರೆ ಅಂದಾಜು ಪಟ್ಟಿ ಹಾಗೂ ಗುತ್ತಿಗೆ ಕರಾರು ವಹಿಗಳನ್ನು ನಿರ್ವಹಿಸಿರುವುದಿಲ್ಲ. ಈ ಬಗ್ಗೆ ನಿರ್ವಹಿಸುವಂತೆ

ಹಿಂದಿನ ಸಾಲಿನ ವರದಿಗಳಲ್ಲಿ ಸೂಚಿಸುತ್ತಾ ಬಂದರೂ ಸಹ, ಇದುವರೆಗೂ ನಿರ್ವಹಿಸಿರುವುದಿಲ್ಲ. ಇದು ಅತೀ ಮುಖ್ಯವಾದ ವಹಿಗಳಾಗಿರುವುದರಿಂದ ಕಡ್ಡಾಯವಾಗಿ ನಿರ್ವಹಿಸಿ ಮುಂದಿನ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಲಾಗಿದೆ.

46) ಕಾಮಗಾರಿಯಲ್ಲಿನ ನ್ಯೂನತೆಗಳು:–

ಪ್ರಸಕ್ತ ಸಾಲಿನ ಟೆಂಡರ್ ಮತ್ತು ತುಂಡು ಗುತ್ತಿಗೆ ಕಾಮಗಾರಿಗಳ ವಿವರಗಳನ್ನು ಅನುಬಂಧ–9 ರಿಂದ 11 ರವರೆಗೆ ನೀಡಿದೆ.

ಟೆಂಡರ್ ಗುತ್ತಿಗೆ ಕಾಮಗಾರಿ ಮತ್ತು ತುಂಡು ಗುತ್ತಿಗೆ ಕಾಮಗಾರಿ ಮತ್ತು ಇಲಾಖಾವತಿಯ ಕಾಮಗಾರಿಗಳಲ್ಲಿ ಈ ಕೆಳಕಂಡ ನ್ಯೂನತೆಗಳು ಲೆಕ್ಕ ಪರಿಶೋಧನೆಯಿಂದ ವ್ಯಕ್ತಪಟ್ಟಿರುತ್ತದೆ.

1) ಟೆಂಡರ್ ಗುತ್ತಿಗೆ ಮತ್ತು ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಕಂಡಿಕೆ 165 (ಎ)(111)ರ ಪ್ರಕಾರ ದರಪಟ್ಟಿ (ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ) ಮತ್ತು ಷೆಡ್ಯೂಲ್ 'ಬಿ' (ಟೆಂಡರ್ ಕಾಮಗಾರಿಗಳಲ್ಲಿ) ತಯಾರು ಮಾಡಿ ಗುತ್ತಿಗೆದಾರರಿಗೆ ನೀಡಿರುವುದಿಲ್ಲ. ಪೂರ್ಣ ಅಂದಾಜು ಪಟ್ಟಿಗಳನ್ನು ಗುತ್ತಿಗೆದಾರರಿಗೆ ನೀಡಲಾಗಿದೆ.

2) ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಗುತ್ತಿಗೆದಾರರೊಡನೆ ಕರಾರು ಮಾಡಿಕೊಳ್ಳುವಾಗ ಲೋಕೋಪಯೋಗಿ ಇಲಾಖೆ ಕಂಡಿಕೆ 63ರ ಪ್ರಕಾರ ನಿಗಧಿತ ನಮೂನೆಯಲ್ಲಿ ಕರಾರು ಉಲ್ಲೇಖಿತ ಸಂಖ್ಯೆ ನಮೂದಿಸಿರುವುದಿಲ್ಲ.

3)ಪ್ರತಿ ಕಾಮಗಾರಿ ಬಿಲ್ಲುಗಳಲ್ಲಿ ಬಿಲ್ಲು ಸ್ವೀಕೃತಿ ಸಂಖ್ಯೆ ನೀಡಿರುವುದಿಲ್ಲ. ಮತ್ತು ಕರಾರು ಪಡೆದಿರುವುದಿಲ್ಲ.

4)ಎಲ್ಲಾ ಕಾಮಗಾರಿಗಳಲ್ಲಿ ಗುತ್ತಿಗೆದಾರರ ಅರ್ಹತೆ ಬಗ್ಗೆ ಯಾವುದೇ ದಾಖಲಾತಿಗಳನ್ನು ಪಡೆದಿರುವುದಿಲ್ಲ.

5)ಕರಾರು ಉಲ್ಲೇಖ ವಹಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

6)ಪ್ರತಿ ಕಾಮಗಾರಿಗಳ ಬಿಲ್ಲಿನಲ್ಲಿ ತಾಂತ್ರಿಕ ಮಂಜೂರಾತಿ ಸಂಖ್ಯೆ ನಮೂದಿಸಲಾಗಿದೆಯೇ ಹೊರತು ಕಾಮಗಾರಿಗಳನ್ನು ಮಾಡಲು ಆಡಳಿತಾತ್ಮಕವಾಗಿ ಪ್ರಾಧಿಕಾರದಲ್ಲಿನ ಸಭೆಯಲ್ಲಿ ನಿರ್ಣಯ ಮಾಡಿಕೊಂಡ ಸಂಖ್ಯೆ ಮತ್ತು ದಿನಾಂಕಗಳ ದಾಖಲಾತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

7)ಪ್ರತಿ ಕಾಮಗಾರಿ ಬಿಲ್ಲುಗಳಲ್ಲಿ ಹಣ ಪಾವತಿ ಮಾಡುವಾಗ ನಗದು ಪುಸ್ತಕದ ಓಚರ್ ಸಂಖ್ಯೆ ನಮೂದಿಸಿರುವುದಿಲ್ಲ.

8)ಕರ್ನಾಟಕ ಲೋಕೋಪಯೋಗಿ ಲೆಕ್ಕ ಸಂಹಿತೆ ಕಂಡಿಕೆ 24 ಡಿ (11) ಪ್ರಕಾರ ಠೇವಣಿ ವಹಿ ಇತರೆ ಮುಂಗಡ ವಹಿಗಳನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ವಹಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

9)ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಪ್ರತಿ ಕಾಮಗಾರಿಗಳ ಬಿಲ್ಲಿನ ಜೊತೆ ಪೂರ್ಣಗೊಂಡ ವರದಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ.

10)ಇಲಾಖಾ ವತಿಯಿಂದ ನಿರ್ವಹಿಸಿರುವ ಕಾಮಗಾರಿಗಳಲ್ಲಿ ಶೇ.10ರಷ್ಟು ಉಳಿತಾಯ ಮಾಡಬೇಕಾಗಿದ್ದು, ಉಳಿತಾಯವನ್ನು ಕಳೆದ ನಂತರ ಬರುವ ಮೊತ್ತಕ್ಕಿಂತ ಹೆಚ್ಚಿಗೆ ವೆಚ್ಚ ಮಾಡಲಾಗಿದೆ.

11)ಎಲ್ಲಾ ಕಾಮಗಾರಿಗಳ ಛಾಯಾ ಚಿತ್ರ (ಫೋಟೋ) ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಈ ಮೇಲಿನ ಕಾಮಗಾರಿಗಳ ನ್ಯೂನತೆಗಳನ್ನು ಸರಿಪಡಿಸಿಕೊಂಡು ನಿರ್ವಹಿಸುವಂತೆ ಹಿಂದಿನ ಸಾಲಿನ ವರದಿಗಳಲ್ಲಿ ಸೂಚಿಸುತ್ತಾ ಬಂದರೂ ಸಹಾ, ಪ್ರಯೋಜನವಾಗದ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುತ್ತಾ ಟೆಂಡರ್/ತುಂಡುಗುತ್ತಿಗೆ/ಇಲಾಖಾ ವತಿಯಿಂದ ಕೈಗೊಳ್ಳುವ

ಕಾಮಗಾರಿಗಳನ್ನು ನಿರ್ವಹಿಸಬೇಕಾದ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಿ ನಿರ್ವಹಿಸುವಂತೆ ಸೂಚಿಸಲಾಗಿದೆ.

47) ಕಾಮಗಾರಿ ಬಿಲ್ಲುಗಳಲ್ಲಿ ಕಡಿಮೆ ರಾಜಧನ ವಸೂಲಿಸಿರುವ ಬಗ್ಗೆ:–

ಅನುಬಂಧ–10 ರಲ್ಲಿನ ಕ್ರಮ ಸಂಖ್ಯೆ 02 ರಲ್ಲಿರುವ ಕಾಮಗಾರಿ ಬಿಲ್ಲಿನಲ್ಲಿ ರಾಜಧನವನ್ನಾಗಿ ರೂ.10660/–ಗಳನ್ನು ಕಟಾಯಿಸುವ ಬದಲು ರೂ.2024/– ಗಳನ್ನು ಮಾತ್ರ ಕಟಾಯಿಸಿದ್ದು, ಉಳಿಕೆ ರೂ.8636/– ಗಳನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವಂತೆ ಸೂಚಿಸಲಾಗಿದೆ.

48)ಕಾಮಗಾರಿ ಸರಬರಾಜು ಬಿಲ್ಲಿನಲ್ಲಿ ಕಾರ್ಮಿಕರ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿ ಕಟಾಯಿಸದಿರುವ ಬಗ್ಗೆ:–

ಅನುಬಂಧ–11ರಲ್ಲಿನ ಕ್ರಮ ಸಂಖ್ಯೆ 02 ರಲ್ಲಿರುವ ಸರಬರಾಜು ಬಿಲ್ಲಿನಲ್ಲಿ ಕಾರ್ಮಿಕ ಕಲ್ಯಾಣ ನಿಧಿಯ ರೂ.186/– ಮತ್ತು ಗುತ್ತಿಗೆದಾರರ ಕ್ಷೇಮ ನಿಧಿಯ ರೂ.19/– ಒಟ್ಟು ರೂ.205/–ಗಳನ್ನು ಬಿಲ್ಲಿನಲ್ಲಿ ಕಟಾಯಿಸಬೇಕಿದ್ದು, ಕಟಾಯಿಸಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಸರಬರಾಜುದಾರರಾದ ಶ್ರೀ.ಎಸ್.ರಮೇಶ್, ಚಿಕ್ಕಬಳ್ಳಿರವರಿಂದ ವಸೂಲಿಸಿ ನಿಗಧಿತ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ.

49)ಖಾಲಿ ಚೀಲಗಳ ವಿಲೇವಾರಿ ಬಗ್ಗೆ:–

2012–13ನೇ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗೆ 16 ಬ್ಯಾಗು ಸಿಮೆಂಟನ್ನು ಖರೀದಿಸಿ ವಿತರಿಸಿದ್ದು, ಸಿಮೆಂಟ್ ಖಾಲಿ ಚೀಲಗಳ ಬಾಬ್ತು ಈ ಕೆಳಕಂಡ ವಿವರಗಳಂತೆ ರೂ.16/–ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

(ಅನುಬಂಧ–11)

ವಿವರ	ಖಾಲಿ ಚೀಲಗಳ ಸಂಖ್ಯೆ	ದರ	ಮೊಬಲಗು
ಸಿಮೆಂಟ್ ಖಾಲಿ ಚೀಲಗಳು	16	1=00	16=00

50)ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿರುವ ರಾಜಧನ, ಮಾರಾಟ ತೆರಿಗೆ, ಆದಾಯ ತೆರಿಗೆ, ಕಾರ್ಮಿಕರ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿ ಇವುಗಳ ಬಾಬ್ತು ಜಮಾ ಮಾಡಿರುವ ವಿವರವನ್ನು ತಪಾಸಣೆಗೆ ಹಾಜರುಪಡಿಸದಿರುವ ಬಗ್ಗೆ:–

2012–13ನೇ ಸಾಲಿನಲ್ಲಿ ನಿರ್ವಹಿಸಲಾಗಿರುವ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ರೂ.8639/–, ಮಾರಾಟ ತೆರಿಗೆ ರೂ.22490/–, ಆದಾಯ ತೆರಿಗೆ 12370/–, ಕಾರ್ಮಿಕರ ಕಲ್ಯಾಣ ನಿಧಿ ರೂ.5588/– ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿ ರೂ.563/– ಒಟ್ಟು ಮೊತ್ತ ರೂ.49650/–ಗಳನ್ನು ವಸೂಲಿಸಲಾಗಿದೆ. ವಸೂಲಿಸಿರುವ ಮೊಬಲಗನ್ನು ಸಂಬಂಧಪಟ್ಟ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವ ವಿವರವನ್ನು ತಪಾಸಣೆಗೆ ಹಾಜರುಪಡಿಸದ ಕಾರಣ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ಜಮಾ ಮಾಡಿರುವ ವಿವರವನ್ನು ಹಾಜರುಪಡಿಸುವವರೆಗೂ ರೂ.49650/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಸಾಮಾನ್ಯ ಅಭಿಪ್ರಾಯ:–

ಹಿಂದಿನ ಸಾಲುಗಳ ಆಡಿಟ್ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸಲು ಕ್ರಮ ವಹಿಸಿರುವುದಿಲ್ಲ. ಲೆಕ್ಕ ಪತ್ರ ನಿರ್ವಹಣೆ ಮತ್ತು ವಹಿಗಳ ನಿರ್ವಹಣೆ ಬಗ್ಗೆ ಕ್ರಮ ಬದ್ಧವಾಗಿ ನಿರ್ವಹಿಸುವಂತೆ ಸೂಚಿಸಿದೆ.

ಸಹಿ/–
ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಮಂಡ್ಯ.

ಅನುಬಂಧ–1

ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಕಛೇರಿಯ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಕಾಣಿಸಿ ಆಕ್ಷೇಪಣೆ ಮತ್ತು ವಸೂಲಾತಿಗಳ ವಿವರ:–

ಕ್ರ.ಸಂ	ವರದಿಯ ವರ್ಷ	ಆಕ್ಷೇಪಣೆಯಲ್ಲಿಟ್ಟ ಮೊತ್ತ		ವಸೂಲಿಗಾಗಿ ಸೂಚಿಸಿದ ಮೊತ್ತ	
		ಕಂಡಿಕೆಗಳು	ಮೊಬಲಗು	ಕಂಡಿಕೆಗಳು	ಮೊಬಲಗು
1	1990–91	6	1602420	11	654196
2	1991–92	1	4191	6	11539
3	1992–93	2	151489	5	328339
4	1993–94	3	243736	8	147348
5	1994–95	2	56760	3	46300
6	1995–96	2	7075	8	73267
7	1996–97	4	36194	4	7949
8	1997–98	1	783094	9	59467
9	1998–99	0	0	4	13299
10	1999–2000	2	28175390	4	902173
11	2000–2001	2	29540	5	1445
12	2001–2002	2	176961	4	1868
13	2002–2003	6	1512325	6	477961
14	2003–2004	4	154658	7	359417
15	2004–2005	2	101578	10	50526
16	2005–2006	2	186286	14	7926036
17	2006–2007	1	27500	5	77479
18	2007–2008	1	35500	4	57046
19	2008–2009	5	672228	5	10275
20	2009–2010	4	445811	2	108334
21	2010–2011	0	0	2	9769
22	2011–12	1	880008	2	88659
	ಒಟ್ಟು	53	35282744	128	11412692

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–2

2012–13ನೇ ಸಾಲಿನ ಮಾಹೆವಾರು ಜಮಾ ಖರ್ಚಿನ ವಿವರ

ಕ್ರ.ಸಂ	ತಿಂಗಳು	ಜಮಾ	ಖರ್ಚು
1	ಏಪ್ರಿಲ್–2012	13,550,823.00	973,186.00
2	ಮೇ–2012	5,978,341.00	10,877,860.00
3	ಜೂನ್–2012	8,902,097.00	11,201,022.00
4	ಜುಲೈ–2012	9,847,827.00	386,671.00
5	ಆಗಸ್ಟ್–2012	4,569,604.00	11,090,448.00
6	ಸೆಪ್ಟೆಂಬರ್–2012	16,719,319.00	18,054,535.00
7	ಅಕ್ಟೋಬರ್–2012	4,650,887.00	739,170.00
8	ನವಂಬರ್–2012	6,541,995.00	1,247,889.00
9	ಡಿಸೆಂಬರ್–2012	152,595.00	556,606.00
10	ಜನವರಿ–2013	1,724,614.00	546,664.00
11	ಫೆಬ್ರವರಿ–2013	26,707,494.00	52,768,557.00
12	ಮಾರ್ಚ್–2013	1,041,781.00	704,310.00
	ಜುಮ್ಲಾ	100,387,377.00	109,146,918.00

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–3

2012–13ನೇ ಸಾಲಿನ ಜಮಾ (ದಿನಾಂಕ:01.04.2012 ರಿಂದ 31.03.2013)

ಕ್ರ.ಸಂ	ವಿವರ	ಮೊತ್ತ
1	ಆದೃಪ ಪರಿಶೀಲನಾ ಶುಲ್ಕ	221,405.00
2	ಆದೃಪ ಉತ್ತಮತೆ ಶುಲ್ಕ	1,173,513.00
3	ನಕಲು ಶುಲ್ಕ	13,850.00
4	ಖಾತಾ ಶುಲ್ಕ	50,710.00
5	ಕಂದಾಯ	820,184.00
6	ಬಡ್ಡಿ ಬಾಬ್ತು	7,787,773.00
7	ಮಾಹಿತಿ ಹಕ್ಕು ಶುಲ್ಕ	4,772.00
8	ಗುತ್ತಿಗೆ ಅವಧಿ ಶುಲ್ಕ	180.00
9	ಸಿ.ಎ.ನಿವೇಶನ ಕಿಮ್ಮತ್ತು	13,789,600.00
10	ಮೂಲೆ ನಿವೇಶನ ಕಿಮ್ಮತ್ತು	21,645,000.00
11	ವಾಣಿಜ್ಯ ನಿವೇಶನ ಕಿಮ್ಮತ್ತು	15,650,000.00
12	ಖಾಸಗಿ ಬಡಾವಣೆ ಉದ್ಯಾನವನ & ಬಯಲು ಜಾಗಕ್ಕೆ ಬದಲಿ ಶುಲ್ಕ ವಸೂಲಿ	457,187.00
13	ಸಿ.ಎ.ನಿವೇಶನ ಅರ್ಜಿ ಶುಲ್ಕ	5,500.00
14	ನೀರು ಸಂಪರ್ಕ ಶುಲ್ಕ	6,000.00
15	ವಕೀಲರ ಸಲಹೆ ಶುಲ್ಕ ವಸೂಲಿ	500.00
16	ಸಿ.ಎ.ನಿವೇಶನ ನೋಂದಣಿ ಶುಲ್ಕ	6,000.00
17	ವಾಸದ ದೃಢೀಕರಣ ಪತ್ರ ಶುಲ್ಕ	250.00
18	ಟೆಂಡರ್ ಫಾರಂ ಶುಲ್ಕ	414,000.00
19	ಸೆಸ್‌ಗಳು	108,041.00
20	ಟೆಂಡರ್ ಕಾಮಗಾರಿ ಇ.ಎಂ.ಡಿ. ಬಾಬ್ತು	245,700.00
21	ಟೆಂಡರ್ ಫಾರಂ ಶುಲ್ಕ	3,000.00
22	ಹೆಚ್ಚುವರಿ ನಿವೇಶನ ಕಿಮ್ಮತ್ತು	386,307.00
23	ನಕ್ಷೆ ತಯಾರಿಕಾ ಶುಲ್ಕ	21,285.00
24	ವೆಬ್ ಶುಲ್ಕ	43,000.00
25	ಸ್ಲಂ ಕರ	163,308.00
26	ರಸ್ತೆ ಕಟಿಂಗ್ ಶುಲ್ಕ	9,000.00
27	ಕೆರೆ ಸಂರಕ್ಷಣಾ ಶುಲ್ಕ	2,318,342.00
28	ಭೂ ಬದಲಾವಣೆ ಪ್ರಕಟಣೆ ಶುಲ್ಕ ವಸೂಲಿ	28,020.00
29	ನೆಲ ಬಾಡಿಗೆ ಬಾಬ್ತು	4,250.00
30	ಭೂ ಉಪಯೋಗ ಅಭಿಪ್ರಾಯ ಶುಲ್ಕ	3,200.00
31	ನಿಗಧಿತ ಠೇವಣಿ ವಾಪಸ್	35,000,000.00
32	ಆದೃಪ ಅರ್ಜಿ ಶುಲ್ಕ	500.00
33	ವಾಹನ ಟೆಂಡರ್ ಇ.ಎಂ.ಡಿ. ವಾಪಸ್	5,000.00
34	ಅವಧಿ ಮುಗಿದಿರುವ ಚೆಕ್ ರದ್ದು ಬಾಬ್ತು	2,000.00
	ಒಟ್ಟು	100,387,377.00

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–3

2012–13ನೇ ಸಾಲಿನ ಖರ್ಚಿನ ವಿವರ
(ದಿನಾಂಕ:01.04.2012 ರಿಂದ 31.03.2013)

ಕ್ರ.ಸಂ	ವಿವರ	ಮೊತ್ತ
1	ಸಿಬ್ಬಂದಿ ವೇತನ ಬಾಬ್ತು	3,925,272.00
2	ಅಧ್ಯಕ್ಷರ ಗೌರವಧನ – 42000 + ಮನೆ ಬಾಡಿಗೆ ಭತ್ಯೆ – 54000	96,000.00
3	ಹೆಚ್ಚುವರಿ ಸಿಬ್ಬಂದಿ ವೇತನ ಬಾಬ್ತು	521,799.00
4	ಭದ್ರತಾ ಸಿಬ್ಬಂದಿ ವೆಚ್ಚ	178,020.00
5	ದಿನಪತ್ರಿಕೆ ಬಾಬ್ತು	4,560.00
6	ವಕೀಲರ ಶುಲ್ಕ	64,750.00
7	ಕಚೇರಿ ವಿದ್ಯುತ್ ವೆಚ್ಚ	24,342.00
8	ಕಾಮಗಾರಿ ಬಿಲ್ಲುಗಳ ಮಾರಾಟ ತೆರಿಗೆ	50,735.00
9	ಕಾಮಗಾರಿ ಬಿಲ್ಲುಗಳ ಆದಾಯ ತೆರಿಗೆ	27,905.00
10	ಕಾಮಗಾರಿ ಬಿಲ್ಲುಗಳ ರಾಜಧನ	24,349.00
11	ಕಾಮಗಾರಿ ಬಿಲ್ಲುಗಳ ಕ.ಕಾ ಸೆಸ್	12,338.00
12	ಕಾಮಗಾರಿ ಬಿಲ್ಲುಗಳ ಗುತ್ತಿಗೆದಾರರ ಕ್ಷೇಮ ನಿಧಿ	1,250.00
13	ಬದಲಿ ನಿವೇಶನ ಮುಕ್ರಾಂಕ ವೆಚ್ಚ	8,668.00
14	ವಿನಬ ವಿದ್ಯುತ್ ವೆಚ್ಚ	471,864.00
15	ಹರಾಜು ಕಾರ್ಯಕ್ರಮ ವಿಡಿಯೋ/ಫೋಟೋ ವೆಚ್ಚ	4,175.00
16	ಹೊಸ ಬಡಾವಣೆ ಆರ್.ಟಿ.ಸಿ. ಖರೀದಿ ವೆಚ್ಚ	5,000.00
17	ಕಚೇರಿ ದೂರವಾಣಿ ವೆಚ್ಚ	31,543.00
18	ವಿನಬ ನಿವೇಶನ ಕಿಮ್ಮತ್ತು ವಾಪಸ್	12,632.00
19	ವಿನಬ ಫೋಟೋ ತೆಗೆಸಿದ ವೆಚ್ಚ	2,000.00
20	ವಾಹನಗಳ ಇಂಧನ ವೆಚ್ಚ	268,278.00
21	ಅಂಬೇಡ್ಕರ್/ಬಾಬು ಜಗಜೀವನ್‌ರಾಮ್ ರವರ ಜಯಂತಿ ಪ್ರಯುಕ್ತ ವಂತಿಕೆ	10,000.00
22	ವಿವಿಧ ಬಿಲ್ಲುಗಳ ಕಟಾಯಿಸಿದ ಆದಾಯ ತೆರಿಗೆ	75,936.00
23	ಹರಾಜು ಕಾರ್ಯಕ್ರಮ ಶಾಮಿಯಾನ ಇತರೆ ವೆಚ್ಚ	7,700.00
24	ಅಕ್ರಮ–ಸಕ್ರಮ ಶುಲ್ಕ	53,974.00
25	ಪ್ರಕಟಣೆ ವೆಚ್ಚ	278,405.00
26	ಸಭೆ ಉಪಹಾರ	14,505.00
27	ವಾಹನ ದುರಸ್ಥಿ ವೆಚ್ಚ	106,132.00
28	ಟೆಂಡರ್ ಕಾಮಗಾರಿ ಬಿಲ್ಲುಗಳ ಇ,ಎಂ.ಡಿ. ವಾಪಸ್	230,600.00
29	ಟೆಂಡರ್ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ಎಫ್.ಎಸ್..ಡಿ. ವಾಪಸ್	341,724.00
30	ಕಂಪ್ಯೂಟರ್ ಸರ್ವೀಸ್ ಮತ್ತು ಕಾರ್ಟ್ರೆಜ್ ವೆಚ್ಚ	8,950.00
31	ಆರ್.ಟಿ.ಸಿ. ಪರಿಶೀಲನಾ ಶುಲ್ಕ	200.00
32	ನಿಗಧಿತ ಠೇವಣಿಯಲ್ಲಿ ತೊಡಗಿಸಿದ ಬಾಬ್ತು	99,821,100.00

33	ಮುದ್ರಣ ವೆಚ್ಚ	13,462.00
34	ಸಿ.ಎ.ನಿವೇಶನ ಪ್ರಾರಂಭಿಕ ಠೇವಣಿ ವಾಪಸ್	897,017.00
35	ಅಂದಾಜು ಪಟ್ಟಿ ಪರಿಶೀಲನಾ ಶುಲ್ಕ /ತಾಂತ್ರಿಕ ಪರಿಶೀಲನಾ ಶುಲ್ಕ	21,500.00
36	ಅಧ್ಯಕ್ಷರ ಪ್ರಯಾಣ ವೆಚ್ಚ	7,268.00
37	ಕಚೇರಿ ವಿದ್ಯುತ್ ದುರಸ್ಥಿ ವೆಚ್ಚ	46,797.00
38	ಲೇಖನ ಸಾಮಾಗ್ರಿ ಖರೀದಿ ವೆಚ್ಚ	25,591.00
39	ಸಾತನೂರು ಚನ್ನಯ್ಯ ಬಡಾವಣೆ ಸೆಪ್ಟಿ ಟ್ಯಾಂಕ್ ಕಾಮಗಾರಿ ವೆಚ್ಚ	48,830.00
40	ಕಚೇರಿಗೆ ವಾಟರ್ ಫ್ಯೂರಿ ಫೈಯರ್ ಖರೀದಿ ವೆಚ್ಚ	18,250.00
41	ಅಂಚೆ ಚೀಟಿ ಖರೀದಿ ಬಾಬ್ತು	20,000.00
42	ರಾಷ್ಟ್ರೀಯ ಹಬ್ಬದ ವಂತಿಕೆ	5,000.00
43	ಕಛೇರಿಗೆ ಬಣ್ಣ ಮತ್ತು ದುರಸ್ಥಿ ಕಾಮಗಾರಿ	232,320.00
44	ಸಾತನೂರು ಬಡಾವಣೆ ನಿವೇಶನ ನೋಂದಣಿ ವಾಪಸ್	500.00
45	ಮಣ್ಣು ಪರೀಕ್ಷಾ ಶುಲ್ಕ	2,809.00
46	ಟೆಂಡರ್ ಕಾಮಗಾರಿ ಪ್ರಕಟಣೆ ವೆಚ್ಚ	55,683.00
47	ಜೆರಾಕ್ಸ್ ಬಾಬ್ತು/ನಕ್ಷೆ ಜೆರಾಕ್ಸ್ ಬಾಬ್ತು	3,949.00
48	ಅಧ್ಯಕ್ಷರ ಲೇಟರ್ ಪ್ಯಾಡ್ ಮುದ್ರಣ ವೆಚ್ಚ	750.00
49	ಪ್ರೆಸ್ ಮೀಟ್ ಶುಲ್ಕ	500.00
50	ಕಚೇರಿಯಲ್ಲಿ ಸ್ವಾತಂತ್ರೋತ್ಸವದ ಕಾರ್ಯಕ್ರಮ ವೆಚ್ಚ / ಗಣರಾಜ್ಯೋತ್ಸವ ಕಾರ್ಯಕ್ರಮ ವೆಚ್ಚ	5,035.00
51	ಸಾದಿಲ್ವಾರು ವೆಚ್ಚ	866.00
52	ವಾಹನ ವಿಮೆ ಬಾಬ್ತು	11,043.00
53	ಹಬ್ಬದ ಮುಂಗಡ ಬಾಬ್ತು	35,000.00
54	ಜೆರಾಕ್ಸ್ ಯಂತ್ರ ಖರೀದಿ ಬಾಬ್ತು	69,683.00
55	ಕಾಫಿ ಮೇಕರ್ ಖರೀದಿ ಬಾಬ್ತು	2,080.00
56	ವಾಹನದ ಬಾಡಿಗೆ ಬಾಬ್ತು/ ಆಯುಕ್ತರವರ ಕಾರು ಬಾಡಿಗೆ ಬಾಬ್ತು	185,000.00
57	ಹೆಚ್ಚುವರಿ ನಿವೇಶನ ಕಿಮ್ಮತ್ತು ವಾಪಸ್	386,307.00
58	ವಿನ್ಯಾಸ ನಕ್ಷೆ ಶುಲ್ಕ	28,437.00
59	ವಾಹನಗಳ ಆಯುದಾ ಪೂಜಾ ವೆಚ್ಚ	1,000.00
60	ಸಭೆ ವಿಡಿಯೋ ಚಿತ್ರೀಕರಣ ವೆಚ್ಚ/ ಸಭೆ ಫೋಟೋ ತೆಗೆದ ವೆಚ್ಚ	4,900.00
61	ಶಂಕುಸ್ಥಾಪನೆ ಕಾರ್ಯಕ್ರಮ ವೆಚ್ಚ	40,000.00
62	ಜಾಹೀರತು ವೆಚ್ಚ	20,000.00
63	ಫೋಟೋ ಲ್ಯಾಮಿನೇಷನ್ ವೆಚ್ಚ	800.00
64	ಗ್ರಂಥಾಲಯ ಕರ ಬಾಬ್ತು	219,974.00
65	ಆದಾಯ ತೆರಿಗೆ ತ್ರೈಮಾಸಿಕ ವರದಿ ಬಾಬ್ತು	1,875.00
66	ಇತರೆ ಕಾಮಗಾರಿ ವೆಚ್ಚ	49,986.00
	ಒಟ್ಟು	109,146,918.00

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–4

31.03.2013ಕ್ಕೆ ಅಖೈರು ಶಿಲ್ಕಿನ ಹೂಡಿಕೆಗಳ ವಿವರ ಕೆಳಕಂಡಂತಿರುತ್ತದೆ.

ಕ್ರ.ಸಂ	ಠೇವಣಿ ಪತ್ರದ ಸಂಖ್ಯೆ & ದಿನಾಂಕ	ಬ್ಯಾಂಕಿನ ಹೆಸರು	ಠೇವಣಿ ಮೊತ್ತ
1	320609/24.09.2012	ಎಸ್.ಬಿ.ಎಂ, ಮಂಡ್ಯ	500,000.00
2	466591/09.02.2013	ಕೆನರಾ ಬ್ಯಾಂಕ್, ಮಂಡ್ಯ	10,233,687.00
3	466592/13.02.2013	ಕೆನರಾ ಬ್ಯಾಂಕ್, ಮಂಡ್ಯ	10,233,687.00
4	035188/05.10.2012	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಹಲಗೂರು.	2,500,000.00
5	118030/08.02.2013	ಇಂಡಿಯನ್ ಬ್ಯಾಂಕ್, ಮಂಡ್ಯ	10,000,000.00
6	118113/08.02.2013	ಇಂಡಿಯನ್ ಬ್ಯಾಂಕ್, ಮಂಡ್ಯ	10,000,000.00
7	108030/17.02.2013	ಇಂಡಿಯನ್ ಬ್ಯಾಂಕ್, ಮಂಡ್ಯ	10,000,000.00
8	118133/17.02.2013	ಇಂಡಿಯನ್ ಬ್ಯಾಂಕ್, ಮಂಡ್ಯ	10,000,000.00
9	118072/22.02.2013	ಇಂಡಿಯನ್ ಬ್ಯಾಂಕ್, ಮಂಡ್ಯ	10,000,000.00
10	389383/25.01.2013	ಅಲಹಾಬಾದ್ ಬ್ಯಾಂಕ್, ಮಂಡ್ಯ	10,000,000.00
11	096057/27.10.2012	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಹೆಚ್.ಮಲ್ಲಿಗೆರೆ.	2,080,576.00
12	389329/24.11.2012	ಅಲಹಾಬಾದ್ ಬ್ಯಾಂಕ್, ಮಂಡ್ಯ	8,088,196.00
13	096111/18.01.2013	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಬೆಸಗರಹಳ್ಳಿ	5,000,000.00
14	389631/07.02.2013	ಅಲಹಾಬಾದ್ ಬ್ಯಾಂಕ್, ಮಂಡ್ಯ	7,500,000.00
15	097946/15.02.2013	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ದೊ.ಬ್ಯಾಡರಹಳ್ಳಿ	2,500,000.00
16	102006/16.02.2013	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ತಗ್ಗಹಳ್ಳಿ	5,486,829.00
17	ಬಿಡಿಸಿ 47/2012	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್, ಮಂಡ್ಯ	500,000.00
	ಜುಮ್ಲಾ		114,622,975.00

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–5			
ವಿವೇಕಾನಂದ ನಗರ ಬಡಾವಣೆಯ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಾರಂಭಿಕ ಠೇವಣಿ ವಿವರ (31–03–2013 ಕ್ಕೆ)			
ಕ್ರ.ಸಂ	ಅರ್ಜಿಗಳ ಸಂಖ್ಯೆ	ನಿವೇಶನ ಅಳತೆ	ಒಟ್ಟು ಮೊತ್ತ
1	123	20*30	159,000.00
2	96	30*40	366,300.00
3	50	40*60	532,800.00
4	9	50*80	207,000.00
	ಬ್ಯಿಃ		1,265,100.00

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–6

ವಿವೇಕಾನಂದನಗರ ಬಡಾವಣೆಯಲ್ಲಿ 2012–13ನೇ ಸಾಲಿನಲ್ಲಿ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹರಾಜು ಹಣ ಪಾವತಿಸಿರುವ ವಿವರ

ಕ್ರ.ಸಂ	ಹೆಸರು	ನಿವೇಶನ ಸಂಖ್ಯೆ	ನಿವೇಶನ ಮೌಲ್ಯ	ನಿಗಧಿತ ಅವಧಿಯಲ್ಲಿ ಪಾವತಿಸಿರುವ ಮೊತ್ತ ರೂ.	ಉಳಿಕೆ ಮೊತ್ತ	ಶೇ.18 ರಂತೆ ವಾರ್ಷಿಕ ಬಡ್ಡಿ ರೂ.	ಒಟ್ಟು ರೂ. (ಉಳಿಕೆ ಮೊತ್ತ ಮತ್ತು ಬಡ್ಡಿ)
1	ವಿ.ಎಸ್.ವಿನುತ	357	1115000	1115000	0	0	1115000
2	ಎಲ್.ಬಿ.ನರೇಂದ್ರಕುಮಾರ್	419	1520000	1520000	0	0	1520000
3	ಎಸ್.ವಿಮಲ್‌ಕುಮಾರ್	393	1385000	1385000	0	0	1385000
4	ಎಸ್.ಕೆ.ಶಿವಣ್ಣ	428	1420000	1420000	0	0	1420000
5	ಮಹಾವೀರ್‌ಚಂದ್	375	1065000	750000	315000	2641	1067641
6	ಡಿ.ಸುಖರಾಂ	420	1500000	375000	1125000	6103	1506103
7	ಎಸ್.ರಾಘವೇಂದ್ರ	451	2865000	2865000	0	0	2865000
8	ಹೆಚ್.ಪಿ.ಶಿವರಾಮು	384	1505000	876250	628750	17364	1522364
9	ಜೆ.ಎನ್.ನಾಗೇಶ್	410	1430000	358000	1072000	33013	1463013
10	ಚಿಕ್ಕಣ್ಣ	467	1515000	930000	585000	15196	1530196
11	ಜಿ.ಪಿ.ಸಿದ್ದೇಗೌಡ	383	1405000	805000	600000	13693	1418693
12	ಹೆಚ್.ಟಿ.ಮಹದೇವಪ್ಪ	450	1250000	320000	930000	4202	1254202
13	ಚೇತನ್‌ಕುಮಾರ್	402	1200000	650000	550000	15460	1215460
14	ಕೆ.ರಾಮಯ್ಯ	26	2765000	2765000	0	0	2765000
15	ಹೆಚ್.ಎಂ.ಉಮೇಶ್	18	1300000	1300000	0	0	1300000
16	ಹೆಚ್.ಜಿ.ಸುರೇಂದ್ರ ಚಂದ್ರ ಬಾಬು	20	2835000	1108750	1726250	47673	2882673
17	ಮೊಹಮದ್ ಸಾದತ್‌ವುಲ್ಲಾ	12	2135000	535000	1600000	87584	2222584
18	ಸೈಯದ್ ಖದೀರ್ ಪಾಷ	15	2300000	575000	1725000	91450	2391450
19	ಸೈಯದ್ ಖದೀರ್ ಪಾಷ	16	2350000	588000	1762000	114700	2464700
	ಒಟ್ಟು		32860000	20241000	12619000	449079	33309079

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ–7

ವಿವೇಕಾನಂದನಗರ ಬಡಾವಣೆಯಲ್ಲಿ 2012–13ನೇ ಸಾಲಿನಲ್ಲಿ ನಾಗರೀಕ ಸೌಕರ್ಯ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಹಣ ಪಾವತಿಸಿರುವ ವಿವರ

ಕ್ರ.ಸಂ	ಹೆಸರು	ನಿವೇಶನ ಸಂಖ್ಯೆ	ನಿವೇಶನ ಮೌಲ್ಯ	ಪಾವತಿಸಿರುವ ಮೊತ್ತ ರೂ.
1	ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ	9 'ಎ' ಮತ್ತು 9 'ಬಿ'	4500000	4500000
2	ಕುಲ ಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾ ನಿಲಯ, ಮಾನಸ ಗಂಗೋತ್ರಿ, ಮೈಸೂರು	11 'ಎ'	925000	925000
3	ಜಿಲ್ಲಾ ಯುವಜನ ಸಮನ್ವಯಾಧಿಕಾರಿ, ನೆಹರು ಯುವ ಕೇಂದ್ರ, ಮಂಡ್ಯ	4	209820	209820
4	ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು.	2/ಬಿ	544500	544500
5	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಚೇರಿ, ಮಂಡ್ಯ	1	4369514	4369514
	ಒಟ್ಟು		10548834	10548834

ಸಹಿ/–
ಸಹಾಯಕ ನಿಯಂತ್ರಕರು
ಸ್ಥಳೆಪವ:ಮಂಡ್ಯ

ಅನುಬಂಧ–8

ವಿವೇಕಾನಂದನಗರ ಬಡಾವಣೆಯಲ್ಲಿ 2012–13ನೇ ಸಾಲಿನಲ್ಲಿ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹರಾಜು ಮಾಡಿದ್ದು, ಬಾಕಿ ಹಣವನ್ನು ಪಾವತಿ ಮಾಡದಿರುವ ನಿವೇಶನ ಬಿಡ್ದುದಾರರ ವಿವರಗಳು

ಕ್ರ.ಸಂ	ನಿವೇಶನದಾರರ ಹೆಸರು	ನಿವೇಶನ ಸಂಖ್ಯೆ	ನಿವೇಶನ ಬಿಡ್ ಮೊತ್ತ ರೂ.	ಪಾವತಿಸಿರುವ ಮೊತ್ತ ರೂ.	ಬಾಕಿ ಮೊತ್ತ ರೂ.
1	ಎಂ.ಜಿ.ತಿಮ್ಮೇಗೌಡ	365	1625000	410000	1215000
2	ಸಿ.ಆರ್.ರಾಮಲಿಂಗು	401	1395000	1300000	95000
3	ಹೆಚ್.ಜೆ.ಚಂದ್ರ	411	1230000	620000	610000
4	ಸತೀಶ್	13	2215000	570000	1645000
	ಮಹೇಶ್.ಎಸ್.ಪಿ.	14	2230000	570000	1660000
5	ಪ್ರೇಮಲತಾ	17	1415000	805000	610000
	ಒಟ್ಟು		10110000	4275000	5835000

ಸಹಿ/–
ಸಹಾಯಕ ನಿಯಂತ್ರಕರು
ಸ್ಥಳೆಪವ:ಮಂಡ್ಯ

ಅನುಬಂಧ–9

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 2012–13ನೇ ಸಾಲಿನ ಟೆಂಡರ್ ಕಾಮಗಾರಿ ಬಿಲ್ಲುಗಳ ವಿವರಗಳು:–

ಕ್ರ. ಸಂ	ಕಾಮಗಾರಿ ಹೆಸರು	ಅಳತೆ ಪುಸ್ತಕ ಸಂಖ್ಯೆ	ಗುತ್ತಿಗೆದಾರರ ಕ್ಷೇಮ ನಿಧಿ	ಅಂದಾಜು ಮೊತ್ತ ಲಕ್ಷ	ಬಿಲ್ಲಿನ ಮೊತ್ತ	ರಾಜಧನ			ಮಾರಾಟ ತೆರಿಗೆ			ಕಡಿತಗೊಳ್ಳಬೇಕಾಗಿರುವ ಆದಾಯ ತೆರಿಗೆ			ಕಡಿತಗೊಳ್ಳಬೇಕಾಗಿರುವ ಕಾರ್ಮಿಕ ಕಲ್ಯಾಣ ನಿಧಿ			ಗುತ್ತಿಗೆದಾರರ ಹೆಸರು
						ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	
1	2	3	4	5	6	7	8	9	10	11	12	13	14	15	16	17	18	19
1	ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯ ಸ್ಪೆಷಲ್ ರಿಪೇರಿ ಕಾಮಗಾರಿ	35/ 78–84	265	2.75	264904	–	–	–	10596	10596	–	5828	5828	–	2649	2649	–	ಚನ್ನರಾಮ ಮಂಡ್ಯ
2	ವಿವೇಕಾನಂದನಗರ ಬಡಾವಣೆಯಲ್ಲಿ 250 ವ್ಯಾಟ್ಸ್ ಮೆಟಲ್ ಹೈಲೇಡ್ ಫಿಟ್ಟಿಂಗ್ಸ್ ಮತ್ತು 1*40 ವ್ಯಾಟ್ಸ್ ಪೋರ್ಸೋಸೆಂಟ್ ಬೀದಿ ದೀಪಗಳನ್ನು ಅಳವಡಿಸುವುದು ಹಾಗೂ ಬೀದಿ ದೀಪಗಳ ಸಲಕರಣೆಗಳನ್ನು ಬದಲಾಯಿಸುವ ಕಾಮಗಾರಿ	36/ 51–54	103	4.95	103425	–	–	–	4137	4137	–	2275	2275	–	1034	1034	–	ವಿ.ಎನ್. ಎಲೆಕ್ಟ್ರಿಕಲ್ಸ್, ಮೈಸೂರು
	ಒಟ್ಟು		368		368329				14733	14733	–	8103	8103	–	3683	3683	–	

ಸಹಿ/–

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ-೧೦

ಮಂಡ್ಯ ನಗರಾಭಿವೃದ್ದಿ ಪ್ರಾಧಿಕಾರದ ವತಿಯಿಂದ ೨೦೧೨-೧೩ನೇ ಸಾಲಿನ ತುಂಡು ಗುತ್ತಿಗೆ ಕಾಮಗಾರಿ ಬಿಲ್ಲುಗಳ ವಿವರಗಳು:-

ಕ್ರ.ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ ಲಕ್ಷ	ಅಳತೆ ಪುಸ್ತಕ/ಪುಟ ಸಂಖ್ಯೆ	ಬಿಲ್ಲಿನ ಮೊತ್ತ	ರಾಜಧನ			ಮಾರಾಟ ತೆರಿಗೆ			ಆದಾಯ ತೆರಿಗೆ			ಕಾರ್ಮಿಕ ಕಲ್ಯಾಣ ನಿಧಿ			ಗುತ್ತಿಗೆದಾರರ ಕ್ಷೇಮ ನಿಧಿ	ಗುತ್ತಿಗೆದಾರರ ಹೆಸರು
					ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ		
1	2	3	4	5	6	7	8	9	10	11	12	13	14	15	16	17	18	19
೧	ಗುತ್ತಲು ಬಡಾವಣೆಯ ಸರ್ವೇ ನಂ.೪೮೦ರಲ್ಲಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಅವಸತಿ ಬಡಾವಣೆಯಲ್ಲಿನ ---ಟ್ಯಾಂಕ್‌ನಿಂದ ಸಾರ್ವಜನಿಕರಿಗೆ ಸುರಕ್ಷತೆ ಒದಗಿಸುವ ಕಾಮಗಾರಿ	60000	36/55-56	59557	6415	6415	–	2382	2382	–	1310	1310	–	560	560	–	60	ರವಿ, ಮಂಡ್ಯ
೨	ವಿವೇಕಾನಂದನಗರ ಬಡಾವಣೆಯ ಉಪಕೇಂದ್ರದಿಂದ ೦.೦೦ಮೀ ಸರಪಳಿಯಿಂದ ೨೦೦ ಮೀ ವರೆಗೆ ಮಳೆ ನೀರಿನ ಚರಂಡಿಯ ಗೋಡೆಗಳ ಹಿಂಭಾಗ ಫಿಲ್ಟರ್ ಮಣ್ಣು ತುಂಬುವ ಕಾಮಗಾರಿ	99500	36/49-50	98758	10660	2024	8636	3950	3950	–	2173	2173	–	988	988	–	99	ಬಿ.ಎಸ್. ಚಂದ್ರಶೇಖರ್ ಮಂಡ್ಯ
	ಒಟ್ಟು	**–**	**–**	**158315**	**17075**	**8439**	**8636**	**6332**	**6332**	**–**	**3483**	**3483**	**–**	**1548**	**1548**	**–**	**159**	

ಸಹಿ/-

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

ಅನುಬಂಧ-11

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 2012-13ನೇ ಸಾಲಿನ ಇಲಾಖಾ ಕಾಮಗಾರಿ ಬಿಲ್ಲುಗಳ ವಿವರಗಳು:-

ಕ್ರ ಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ ಲಕ್ಷ	ಅಳತೆ ಪುಸ್ತಕ/ ಪುಟ ಸಂಖ್ಯೆ	ಎಸ್.ಎಂ.ಆರ್.ಸಂಖ್ಯೆ	ಮಾನವ ದಿನಗಳು	ಕೂಲಿ ಮೊತ್ತ	ಸಾಮಾಗ್ರಿ ಖರೀದಿ ಮೊತ್ತ	ಒಟ್ಟು	ರಾಜಧನ			ಮಾರಾಟ ತೆರಿಗೆ			ಆದಾಯ ತೆರಿಗೆ			ಕಾರ್ಮಿಕ ಕಲ್ಯಾಣ ನಿಧಿ ಕಟಾಯಿಸಿರುವುದು	ಗುತ್ತಿಗೆದಾರರ ಕ್ಷೇಮ ನಿಧಿ	ಖಾಲಿ ಚೀಲ ಬಾಬ್ತು	ಗುತ್ತಿಗೆದಾರರ ಹೆಸರು
									ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ	ಕಡಿತಗೊಳಿಸಬೇಕಾಗಿರುವುದು	ಕಡಿತಗೊಳಿಸಿರುವುದು	ಬಾಕಿ				
1	2	3	4	5	6	7	8	9	10	11	12	13	14	15	16	17	18	19	20	21	22
1	ಮಂಡ್ಯ ನಗರದ ಲೇಬರ್ ಕಾಲೋನಿ, ಉದಯಗಿರಿ ಯಲ್ಲಿರುವ ರುದ್ರ ಭೂಮಿ ಕಾಂಪೌಂಡ್‌ಗೆ ಸುಣ್ಣ ಬಣ್ಣ ಮಾಡುವ ಕಾಮಗಾರಿ	25000	35/ 88-89	70257	25	4581	15618	20199	-	-	-	683	683	-	376	376	-	357	36	-	ವೆಂಕಟೇಶ್ ಮಂಡ್ಯ
2	ವಿವೇಕಾನಂದನಗರ ಬಡಾವಣೆಯ ಉಪಕೇಂದ್ರದಿಂದ 0.00ಮೀ ಸರಪಳಿಯಿಂದ 200 ಮೀ ವರೆಗೆ ಮಳೆ ನೀರಿನ ಚರಂಡಿಯ ಗೋಡೆಗಳ ಹಿಂಭಾಗ ಫಿಲ್ಟರ್ ಮಣ್ಣು ತುಂಬುವ ಕಾಮಗಾರಿ	50000	35/85/87	70256	68	12587	17200	29787	200	200	-	742	742	-	408	408	-	186	19	16	ಎಸ್.ರಮೇಶ್, ಚಿಕ್ಕಬಳ್ಳಿ
	ಒಟ್ಟು	-	-			17168	32818	49986	200	200	0	1425	1425	-	784	784	-	543	55	16	

ಸಹಿ/-

ಸಹಾಯಕ ನಿಯಂತ್ರಕರು

ಸ್ಥಳೆಪವ:ಮಂಡ್ಯ

: ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ :

ಬನ್ನೂರು ರಸ್ತೆ, ಪಂಪ್ ಹೌಸ್ ಪಕ್ಕ ಮಂಡ್ಯ-೫೭೧೪೦೧

WebsiteWWW. Mandya.uda.gov.in ಕಛೇರಿ : 08232 222196

Email: Commissionermuda@gmail.com

ಸಂಖ್ಯೆ: ಮಂನಪ್ರಾ/ಸಿಬ್ಬಂದಿ/ಲೆಪವವಿಳಂಭ/2021-22 ದಿನಾಂಕ: 16-09-2021

ಇವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: 2012-13ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ವಿಳಂಭವಾಗಿ ಸಲ್ಲಿಸುತ್ತಿರುವ ಕುರಿತು

ಉಲ್ಲೇಖ: ತಮ್ಮ ಕಚೇರಿ ಪತ್ರ ಸಂಖ್ಯೆ: ಕವಿಸಸ:ಸಕಾ:31:ನಿಪ್ರಾ:2020-21 ದಿನಾಂಕ:-18-08-2021

* * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಕಚೇರಿಯ 2012-13ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸದಿರುವ ಬಗ್ಗೆ ವಿವರಣೆಯನ್ನು ಹಾಗೂ ಜರೂರಾಗಿ ಸಲ್ಲಿಸಲು ಸೂಚಿಸಿ ಉಲ್ಲೇಖ ಪತ್ರದಲ್ಲಿ ತಿಳಿಸಲಾಗಿತ್ತು.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟ ವಿಷಯ ನಿರ್ವಾಹಕರಾದ ಶ್ರೀ ನಾಗರಾಜು ಹೆಚ್.ಕೆ. ರವರು ಸಿ.ಬಿ.ಐ ಕೇಸ್‌ನಲ್ಲಿ ಹಣದುರುಪಯೋಗದಡಿ ಬಂಧನಗೊಂಡಿದ್ದು, ನಂತರ ಸೇವೆಯಿಂದ ವಜಾಗೊಂಡಿರುತ್ತಾರೆ. ಸದರಿರವರು ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿರುವ ಬಗ್ಗೆ ಅಥವಾ ಸಲ್ಲಿಸದಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಚೇರಿಯಲ್ಲಿ ಲಭ್ಯವಿರುವುದಿಲ್ಲ. ಜೊತೆಗೆ ಸದರಿರವರು ಶಾಖೆಯ ಪ್ರಭಾರವನ್ನು ಬೇರೆಯವರಿಗೆ ವಹಿಸಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಚೇರಿಯಲ್ಲಿ ಲಭ್ಯವಿರುವುದಿಲ್ಲ. ಈ ಬಗ್ಗೆ ವಿವರಣೆಯನ್ನು ಕೋರಿ ಅಂದಿನ ಆಯುಕ್ತರು ಹಾಗೂ ವಿಷಯ ನಿರ್ವಾಹಕರಿಗೆ ಪತ್ರ ಬರೆಯಲಾಗಿರುತ್ತದೆ. ಈ ಬಗ್ಗೆ ಸದರಿರವರು ಯಾವುದೇ ವಿವರಣೆಯನ್ನು ಲಿಖಿತವಾಗಿ ನೀಡಿರುವುದಿಲ್ಲ.

2012-13ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಬುಕ್‌ಲೆಟ್ ಹಾಗೂ ಸಿ.ಡಿ. ರೂಪದಲ್ಲಿ ಪ್ರಸ್ತುತ ಸಲ್ಲಿಸಲು ಕ್ರಮ ವಹಿಸಲಾಗಿರುತ್ತದೆ. ಈ ವಿಳಂಭವನ್ನು ಮನ್ನಿಸಬೇಕೆಂದು ತಮ್ಮಲ್ಲಿ ಕೋರಿದೆ ಹಾಗೂ ಇನ್ನು ಮುಂದೆ ಲೆಕ್ಕಪರಿಶೋಧನಾ ವರದಿಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸಲು ಅಗತ್ಯ ಕ್ರಮ ವಹಿಸಲಾಗುವುದು ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ಸಹಿ/-
ಸಹಾಯಕ ನಿಯಂತ್ರಕರು
ಸ್ಥಳೆಪವ:ಮಂಡ್ಯ

2015-16.

Office of the Additional Director,
Regional Office, Mysuru, Division
Zonal Office-2 Primess,
Near Jayanagara Railway gate,
Krishnamurthy Puram, Mysore.
Phone No:- 0821-2434455, 2434646
adromys@gmail.com

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕ
ಪರಿಶೋಧನೆ ಇಲಾಖೆ,
ಪ್ರಾಂತೀಯ ಕಚೇರಿ, ಮೈಸೂರು ವಿಭಾಗ,
ವಲಯ ಕಚೇರಿ-2ರ ಆವರಣ,
ಜಯನಗರ ಗೇಟ್ ಹತ್ತಿರ,
ಕೃಷ್ಣಮೂರ್ತಿ ಪುರಂ, ಮೈಸೂರು.
ದೂರವಾಣಿ ಸಂಖ್ಯೆ:- 2434455, 2434646

ಸಂಖ್ಯೆ:ಅನಿ/ಪ್ರಾಕಮೈ/ನಪ್ರಾಂಮಂ/ಲೆಪವ/2016-17/ 1588-90 ದಿನಾಂಕ: 19-9-2016

ರವರಿಗೆ,

ಆಯುಕ್ತರು,
ನಗರಾಭಿವೃದ್ದಿ ಪ್ರಾಧಿಕಾರ,
ಮಂಡ್ಯ.

Final

ಮಾನ್ಯರೇ,

ವಿಷಯ: 2015-16ನೇ ಸಾಲಿನ ಮಂಡ್ಯ ನಗರಾಭಿವೃದ್ದಿ ಪ್ರಾಧಿಕಾರದ ಲೆಕ್ಕ ಪರಿಶೋಧನೆ ವರದಿಯನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: 1)ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯರವರ ಪತ್ರ ಸಂಖ್ಯೆ:ಎಲ್ಎಎ:ಲೆಪ:2015-16 ದಿ:1-3-2016.

2)ಈ ಕಚೇರಿ ಪತ್ರ ಸಂಖ್ಯೆ:ಅನಿ:ಪ್ರಾಕಮೈ:ಸಿಬ್ಬಂದಿ:2016-17 ದಿ:18-6-2016.

****

ಕರ್ನಾಟಕ ನಗರಾಭಿವೃದ್ದಿ ಪ್ರಾಧಿಕಾರಗಳ ಅಧಿನಿಯಮ 1987ರ ಕಂಡಿಕೆ 48(2)ರ ಪ್ರಕಾರ ನಗರಾಭಿವೃದ್ದಿ ಪ್ರಾಧಿಕಾರ, ಮಂಡ್ಯ ಕಚೇರಿಯ 2015-16ನೇ ಲೆಕ್ಕ ಪರಿಶೋಧನೆಯನ್ನು ಉಲ್ಲೇಖ ಪತ್ರ (1)ರ ಪ್ರಕಾರ ಕೈಗೊಂಡು ಲೆಕ್ಕ ಪರಿಶೋಧನಾ ವರದಿಯನ್ನು ಈ ಕೂಡ ಲಗತ್ತಿಸಿ ಕಳುಹಿಸಿದೆ.

ಕರ್ನಾಟಕ ನಗರಾಭಿವೃದ್ದಿ ಪ್ರಾಧಿಕಾರಗಳ ಅಧಿನಿಯಮ 1987ರ ಕಂಡಿಕೆ 49(6)ರ ಪ್ರಕಾರ ಈ ವರದಿ ತಲುಪಿದ ಒಂದು ತಿಂಗಲ ಅವಧಿಯೊಳಗಾಗಿ ಅನುಸರಣಾ ವರದಿಯನ್ನು ಕಳುಹಿಸಿಕೊಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

19/9/16

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ
ಮತ್ತು ಲೆಕ್ಕ ಪತ್ರ ಇಲಾಖೆ,
ಪ್ರಾಂತೀಯ ಕಚೇರಿ, ಮೈಸೂರು ವಿಭಾಗ,
ಮೈಸೂರು.

ಪ್ರತಿಯನ್ನು:

1. ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಪತ್ರ ಇಲಾಖೆ, 3ನೇ ಮಹಡಿ, ಟಿ.ಟಿ.ಎಂಸಿ.ಕಟ್ಟಡ, ಶಾಂತಿ ನಗರ, ಬೆಂಗಳೂರು ರವರ ಮಾಹಿತಿಗಾಗಿ.
2. ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯರವರ ಮಾಹಿತಿಗಾಗಿ
3. ಕಚೇರಿ ಪ್ರತಿ.

ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯ 2015–16 ನೇ ಸಾಲಿನ ಲೆಕ್ಕತನಿಖಾ ವರದಿಯಲ್ಲಿನ ನೂನ್ಯತೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಿದ ವಿವರ.

ಕ್ರ.ಸಂ.	ಕಂಡಿಕೆ ಸಂಖ್ಯೆ	ಕಂಡಿಕೆಯ ವಿವರ	ಆಕ್ಷೇಪಣೆ ಮೊಬಲಗು	ವಸೂಲಾತಿ ಮೊಬಲಗು
1	4	ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುವರ್ತನಾ ವರದಿಯನ್ನು ಸಲ್ಲಿಸದಿರುವುದು	–	–
2	9	ಬ್ಯಾಂಕಿನಲ್ಲಿ ಹಣ ಕಟ್ಟಿರುವ ಚಲನ್‌ನಲ್ಲಿ ಕಂಡು ಬಂದ ನ್ಯೂನ್ಯತೆ	–	–
3	18	2012–13ನೇ ಸಾಲಿನಲ್ಲಿ ಠೇವಣಿ ಹಣ ದುರುಪಯೋಗವಾಗಿದ್ದು, ದುರುಪಯೋಗದ ಹಣವನ್ನು ವಸೂಲಾತಿಗೆ ಕ್ರಮ ಕೈಗೊಂಡಿರುವ ಬಗ್ಗೆ	–	–
4	19ಎ	ನಗದು ಪುಸ್ತಕ ನಿರ್ವಹಣೆಯ ಬಗ್ಗೆ	–	–
5	20	ಕಂದಾಯ ವಸೂಲಿ ಬೇಡಿಕೆ ಬಾಕಿ ಬಗ್ಗೆ	–	–
6	23	ಉಪಕರಗಳ ಜಮಾ ಬಗ್ಗೆ	–	–
7	26	ಅನ್ಯಕ್ರಾಂತ ಮಂಜೂರಾತಿಗೆ ರೇಖಾ ನಕ್ಷೆ ಅನುಮೋದನೆ ಶುಲ್ಕ ಕಡಿಮೆ ವಸೂಲಿಸಿರುವುದು	–	1813
8	28	ನಾಗರೀಕ ಸೌಕರ್ಯ ನಿವೇಶನ (ಸಿ.ಎ ನಿವೇಶನ) ಹಂಚಿಕೆ ಮತ್ತು ಗುತ್ತಿಗೆ ನೀಡಿರುವ ಬಗ್ಗೆ	–	–
9	29	ನಿವೇಶನ ಕಿಮ್ಮತ್ತು ವಸೂಲಿಸಿರುವ ಬಗ್ಗೆ	–	–
10	33	ನೌಕರರಿಂದ ಕಟಾಯಿಸಲಾದ ಕಟಾವಣೆಗಳನ್ನು ತಡವಾಗಿ ಜಮಾ ಮಾಡುತ್ತಿರುವುದು	–	–
11	34	ವೇತನ ಬಟಾವಡೆ ವಹಿ ನಿರ್ವಹಣೆಯ ಬಗ್ಗೆ	–	–
12	36	ಪರಿವೀಕ್ಷಣಾ ಅವಧಿ ಘೋಷಣೆ ಮತ್ತು ಇಲಾಖಾ ಪರೀಕ್ಷೆ ತೇರ್ಗಡೆಯಾಗದೇ ವಾರ್ಷಿಕ ವೇತನ ಬಡ್ತಿ ನೀಡಿರುವುದಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ	–	–
13	41	ಕಾಮಗಾರಿ ಬಿಲ್ಲುಗಳಲ್ಲಿ ಸ್ವಾಮ್ಯ ಶುಲ್ಕಗಳನ್ನು ಕಡಿಮೆ ಕಟಾಯಿಸಿರುವುದು ಮತ್ತು ಜಮಾ ಮಾಡದಿರುವುದು	42629	26207

14	43	ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆದಿರುವ ಬಗ್ಗೆ	–	10373
15	44	ಹೊರ ಗುತ್ತಿಗೆ ಮೇಲೆ ಸಿಬ್ಬಂದಿ ಸೌಲಭ್ಯ ನೀಡಿರುವ ಸಂಸ್ಥೆಯವರು ಸೇವಾ ತೆರಿಗೆ ಮತ್ತು ಇ.ಎಸ್.ಐ ಪಾವತಿಸಿರುವ ವಿವರ ಪಡೆಯದಿರುವ ಬಗ್ಗೆ	68035	–
16	46	ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ	–	–
		ಜುಮ್ಲ ರೂ.	110664	38393

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ
ಮತ್ತು ಲೆಕ್ಕ ಪತ್ರ ಇಲಾಖೆ,
ಪ್ರಾಂತೀಯ ಕಚೇರಿ,
ಮೈಸೂರು.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯ 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

1) ಪೀಠಿಕೆ:–

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಂಡಿಕೆ 48(2)ರ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಕಛೇರಿಯ 2015–16ನೇ ಸಾಲಿನ ಲೆಕ್ಕ ತನಿಖೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನಾ ವರದಿ ಸ್ವೀಕರಿಸಿದ ನಂತರ ಅನುಸರಣಾ ವರದಿಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಕಂಡಿಕೆ 49(6)ರ ಪ್ರಕಾರ ಕ್ರಮ ವಹಿಸಲು ಸೂಚಿಸಿದೆ.

2) ಸಾಮಾನ್ಯ ವಿವರಗಳು:–

1	**ಲೆಕ್ಕ ತನಿಖಾ ಸಂಸ್ಥೆಯ ಹೆಸರು**	**ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ**
2	**ಲೆಕ್ಕತನಿಖಾ ಅವಧಿ**	**ದಿ:–01–04–2015 ರಿಂದ ದಿ:–31–03–2016ರವರೆಗೆ**
3	**ಲೆಕ್ಕ ಪರಿಶೋಧನಾ ತಂಡದ ವಿವರ**	**1)ಶ್ರೀ.ಹೆಚ್.ಎಸ್.ಬಸವರಾಜು ಲೆ.ತ.ಅ**
		2)ಶ್ರೀ.ಮಧುಕುಮಾರ್ ಲೆ.ಪ.
		3)ಶ್ರೀ.ಟಿ.ನಂದಕುಮಾರ್ ಲೆ.ಪ.
		4)ಶ್ರೀ.ರಮೇಶ್ ಹೆಚ್.ಬಿ ಲೆ.ಪ.
4	**ಲೆಕ್ಕ ತನಿಖೆ ಪ್ರಾರಂಭ ದಿನಾಂಕ**	**ದಿನಾಂಕ:–23–06–2016**
5	**ಲೆಕ್ಕ ತನಿಖೆ ಮುಕ್ತಾಯ ದಿನಾಂಕ**	**ದಿನಾಂಕ:–30–06–2016**
6	**ಲೆಕ್ಕ ತನಿಖೆಗೆ ತೆಗೆದುಕೊಂಡ ಮಾನವ ದಿನಗಳು**	**26 ಮಾನವನದಿನಗಳು**
7	**ಪುನರ್ ಪರಿಶೀಲನೆ ಮಾಡಿದ ಅಧಿಕಾರಿಗಳ ಹೆಸರು ಮತ್ತು ಪದನಾಮ**	**ಶ್ರೀ.ರಾಮಚಂದ್ರಯ್ಯ ಡಿ.ಆರ್. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ ಕಚೇರಿ, ಮೈಸೂರು.**
	ಪುನರ್ ಪರಿಶೀಲನೆ ಮಾಡಿದ ದಿನಾಂಕ	**14–09–2015**

3) ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳ ಹೆಸರು ಮತ್ತು ಅವಧಿ:–

ಅಧ್ಯಕ್ಷರು	ಶ್ರೀ.ಡಾ॥ಅಜಯ್ ನಾಗಭೂಷಣ್ ಐ.ಎ.ಎಸ್. (ಮಾನ್ಯ ಜಿಲ್ಲಾಧಿಕಾರಿಗಳು)	1–4–2015 ರಿಂದ 31–3–2016
ಆಯುಕ್ತರು	ಶ್ರೀ.ಎ.ದೇವರಾಜು ಕೆ.ಎ.ಎಸ್	1–4–2015 ರಿಂದ 31–3–2016
ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಎಂ.ಕೆ.ತಮ್ಮಣ್ಣ ಶ್ರೀ.ಮಧುಸೂಧನ್	01–04–2015 ರಿಂದ 16–11–2015 04–12–2015 ರಿಂದ 31–03–2016

4) ಹಿಂದಿನಾ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುವರ್ತನಾ ವರದಿ ಸಲ್ಲಿಸುವ ಬಗ್ಗೆ:–

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ನಿಯಮ 48(6) ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2003 ರ ನಿಯಮ 6(7) ರಲ್ಲಿನ ನಿರ್ದೇಶನದಂತೆ ಲೆಕ್ಕ ತನಿಖಾ ವರದಿಗಳಿಗೆ ಕಾಲ ವಿಳಂಭವಿಲ್ಲದಂತೆ, ವರದಿ ತಲುಪಿದ ಮೂರು ತಿಂಗಳ ಒಳಗಾಗಿ ಅನುಪಾಲನಾ ವರದಿ ತಯಾರಿಸಿ, ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಿ, ತೀರುವಳಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ ಸದರಿ ವಿಷಯದ ಬಗ್ಗೆ ಪ್ರತಿ ಸಾಲಿನ ಲೆಕ್ಕ ತಪಾಸಣಾ ವರದಿಯಲ್ಲಿ ಸೂಚನೆ ನೀಡುತ್ತಿದ್ದಾಗ್ಯೂ, ಅನುಸರಣಾ ವರದಿಯನ್ನು ಸಲ್ಲಿಸುವಲ್ಲಿ ವಿಫಲವಾಗಿರುವುದು ಕಂಡುಬಂದಿದೆ. ಆದುದರಿಂದ ಆಡಳಿತ ವರ್ಗವು ಕೂಡಲೇ ಕ್ರಮವಹಿಸಿ ಒಂದು "ಆಡಿಟ್ ಮಿನಿಟ್ ಪುಸ್ತಕ" ತೆರೆದು ಅದರಲ್ಲಿ ಎಲ್ಲಾ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿ ಮೊತ್ತಗಳಿಗೆ ಕಂಡಿಕೆವಾರು ಉತ್ತರ ಸಲ್ಲಿಸಿ ತೀರುವಳಿ ಮಾಡಿಕೊಳ್ಳಲು ವರದಿಯು ಸೂಚಿಸುತ್ತದೆ. ಈ ಕ್ರಮ ಪಾಲಿಸದಿದ್ದಲ್ಲಿ ವರ್ಷದಿಂದ ವರ್ಷಕ್ಕೆ ಆಕ್ಷೇಪಣೆ/ವಸೂಲಾತಿ ಮೊತ್ತಗಳು ಅಧಿಕವಾಗುತ್ತಿದ್ದು, ಕಾಲಕ್ರಮೇಣ ತೀರುವಳಿಯಾಗದೆ ಪ್ರಾಧಿಕಾರಕ್ಕೆ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆ. ಅಂತೆಯೇ 2014–15ನೇ ಸಾಲಿನವರೆಗೆ ರೂ.36204086/– ಗಳು ಆಕ್ಷೇಪಣೆಯಲ್ಲಿಯೂ, ರೂ.63603208/– ಗಳು ವಸೂಲಾತಿಗೂ ಬಾಕಿ ಇರುತ್ತದೆ. ವಿವರಗಳನ್ನು ಅನುಬಂಧ 1 ರಲ್ಲಿ ನೀಡಿದೆ.

5) ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸದಿರುವ ಬಗ್ಗೆ:–

2015–16ನೇ ಸಾಲಿನ ಲೆಕ್ಕಪರಿಶೋಧನೆಗೆ ವಾರ್ಷಿಕ ಲೆಕ್ಕಪತ್ರಗಳನ್ನು ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಮಂಡ್ಯ ಕಚೇರಿಗೆ ಸಲ್ಲಿಸಿರುವುದಿಲ್ಲ. ಲೆಕ್ಕಪರಿಶೋಧನಾ ಸಮಯದಲ್ಲಿ ಹಾಜರುಪಡಿಸಿರುತ್ತಾರೆ.

6)ಭೌತಿಕ ಶಿಲ್ಕುಗಳ ಬಗ್ಗೆ:–

ದಿನಾಂಕ:–23–05–2016 ರಂದು ಈ ಕೆಳಕಂಡ ಶಿಲ್ಕುಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ, ಈ ಕೆಳಕಂಡಂತೆ ಬಾಕಿ ಇದ್ದು, ದಾಸ್ತಾನು ವಹಿಯ ಅಂತಿಮ ಶಿಲ್ಕಿಗೆ ತಾಳೆ ಹೊಂದಿರುತ್ತದೆ. ವಿವರ ಇಂತಿದೆ.

ಕ್ರ.ಸಂ.	ವಿವರ	ಸಂಖ್ಯೆ
1	ನಗದು ಶಿಲ್ಕು	ನಗದು ವಹಿ ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ.
2	ಅಂಚೆ ಚೀಟಿ	1279–00
3	ಖಾಲಿ ರಶೀದಿ ಪುಸ್ತಕಗಳು	ಹಾಜರುಪಡಿಸಿರುವುದಿಲ್ಲ
4	ಅಳತೆ ಪುಸ್ತಕಗಳು	ಹಾಜರುಪಡಿಸಿರುವುದಿಲ್ಲ
5	ಟೆಂಡರ್ ಫಾರಂಗಳು	ಹಾಜರುಪಡಿಸಿರುವುದಿಲ್ಲ
6	ದಿನಗೂಲಿ ಹಾಳೆಗಳು	ಹಾಜರುಪಡಿಸಿರುವುದಿಲ್ಲ
7	ಗುತ್ತಿಗೆ ಕ್ರಯ ಒಪ್ಪಂದ ನಮೂನೆಗಳು	ಹಾಜರುಪಡಿಸಿರುವುದಿಲ್ಲ
8	ಆರಂಭಿಕ ಧೃಢೀಕರಣ ಪತ್ರಗಳು	ಹಾಜರುಪಡಿಸಿರುವುದಿಲ್ಲ

7)ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರುವ ನಮೂನೆಗಳ ವಿವರ:–

2015–16ನೇ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ವಿವಿಧ ನಮೂನೆಗಳು ತಮ್ಮ ವ್ಯಾಪ್ತಿಯಲ್ಲಿ ಯಾವ ನಮೂನೆಗಳು ದಾಸ್ತಾನು ವಹಿಯಲ್ಲಿ ಲಭ್ಯವಿರುತ್ತವೆ ಎಂಬ ವಿವರವಾರು ಲಿಖಿತ ರೂಪದಲ್ಲಿ ವಿವರ ನೀಡುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:05ನ್ನು ದಿನಾಂಕ:28–6–2016 ರಲ್ಲಿ ನೀಡಲಾಗಿದೆ.

ಇದಕ್ಕೆ ಕೆಳಕಂಡ ನಮೂನೆಗಳು ನಮ್ಮಲ್ಲಿ ಚಾಲ್ತಿಯಲ್ಲಿರುತ್ತವೆ ಎಂದು ವಿವರ ನೀಡಿರುತ್ತಾರೆ. ಸದರಂತೆ ವಿವಿಧ ನಮೂನೆಗಳ ವಿವರ ಇಂತಿದೆ.

ಕ್ರ. ಸಂ	ವಿವಿಧ ನಮೂನೆಗಳ ವಿವರ
1	ಆರಂಭಿಕ ಧೃಢೀಕರಣ ಪತ್ರದ ಫಾರಂಗಳು
2	ಎನ್.ಎಂ.ಆರ್ ಫಾರಂಗಳು
3	ಗುತ್ತಿಗೆ ಕ್ರಯದ ಒಪ್ಪಂದ ಫಾರಂಗಳು
4	ರಶೀದಿ ಪುಸ್ತಕಗಳು
5	ಅಳತೆ ಪುಸ್ತಕಗಳು
6	ನಿವೇಶನ ಅರ್ಜಿಗಳು
7	ನಿವೇಶನ ನೊಂದಣಿ ಕಾರ್ಡ್‌ಗಳು
8	ಟೆಂಡರ್ ಫಾರಂಗಳು

8)ವಿವಿಧ ನಮೂನೆಗಳ ದಾಸ್ತಾನು ವಹಿಯನ್ನು ಹಾಜರುಪಡಿಸದಿರುವುದು:–

2015–16ನೇ ಸಾಲಿನಲ್ಲಿ ವಿವಿಧ ನಮೂನೆಗಳ ದಾಸ್ತಾನು ಮತ್ತು ವಿತರಣೆ ವಹಿಯನ್ನು ಭೌತಿಕವಾಗಿ ಪರಿಶೀಲಿಸಲಾಗಿದ್ದು, ಅವುಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:01ನ್ನು ದಿನಾಂಕ:24–6–2016ರಲ್ಲಿ ಕೋರಲಾಗಿದೆ. ಭೌತಿಕವಾಗಿ ಯಾವುದನ್ನು ಹಾಜರುಪಡಿಸದ ಕಾರಣ ಮತ್ತೊಮ್ಮೆ ವಿಚಾರಣಾ ಪತ್ರ ಸಂಖ್ಯೆ:05ನ್ನು ದಿನಾಂಕ:28–6–2016ರಲ್ಲಿ ನೀಡಿದೆ. ಮತ್ತು ಪ್ರತಿ ಸಮಯದಲ್ಲಿಯೂ ಮೌಖಿಕವಾಗಿಯೂ ಸಹ ಕೇಳಲಾಗಿರುತ್ತದೆ. ಆದರೂ ಸಹ ಹಾಜರುಪಡಿಸಲು ವಿಫಲರಾದ ಕಾರಣ ಕೊನೆಯದಾಗಿ ವಿಚಾರಣಾ ಪತ್ರ ಸಂಖ್ಯೆ:10ನ್ನು ದಿನಾಂಕ:30–6–2016ರಲ್ಲಿ ನೀಡಿ ಇದಕ್ಕೆ ಲಿಖಿತ ವಿವರಣೆ

(ಉತ್ತರ) ನೀಡಿ ಹಾಜರುಪಡಿಸುವಂತೆ ಕೋರಿದ್ದು, ಈವರೆವಿಗೂ ಭೌತಿಕವಾಗಿ ವಹಿ ಮತ್ತು ನಮೂನೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಆದಾಗ್ಯೂ ಕಳೆದ ಸಾಲಿನ ಅಂದರೆ 2014–15ನೇ ಸಾಲಿನ ಆಡಿಟ್ ವರದಿಯಲ್ಲಿ ದಾಖಲಿಸಿರುವಂತೆ ದಾಸ್ತಾನು ವಿವರ ಇಂತಿದೆ.

ನಿವೇಶನ ಸೊಂದಾಣಿ ಅರ್ಜಿ (ಕಾರ್ಡ್‌ಗಳು) ದಾಸ್ತಾನು			
1	20*30	2424	12577 ರಿಂದ 15000
2	30*40	707	21294 ರಿಂದ 22000
3	40*60	83	7168 ರಿಂದ 7250
4	50*80	32	1219 ರಿಂದ 1250
ಖಾಲಿ ರಶೀತಿ ಪುಸ್ತಕಗಳು			
		30	21 ರಿಂದ 50
ಎನ್.ಎಂ.ಆರ್. ಫಾರಂಗಳು (ದಿನಗೂಲಿ ಹಾಳೆಗಳು)			
		43	70258 ರಿಂದ 70300
ಗುತ್ತಿಗೆ ಕ್ರಯದ ಒಪ್ಪಂದ ಪತ್ರಗಳು			
		ಕ್ರ.ಸಂ. 180	ಮುಖಬೆಲೆ 20/–
ಅಳತೆ ಪುಸ್ತಕಗಳು			
		08	7443 ರಿಂದ 7450
ನಿವೇಶನ ಅರ್ಜಿಗಳು			
		4985	5916 ರಿಂದ 6000 ಮತ್ತು 6101 ರಿಂದ 11000

ಟೆಂಡರ್ ಫಾರಂಗಳು			
		550 ಫಾರಂಗಳು	

ಈ ಮೇಲಿನವುಗಳನ್ನು ಕಳೆದ ಸಾಲಿನ ಆಡಿಟ್ ವರದಿಯಲ್ಲಿರುವಂತೆ ನೀಡಲಾಗಿದೆ.

9)ಬ್ಯಾಂಕಿನಲ್ಲಿ ಹಣ ಕಟ್ಟಿರುವ ಚಲನ್‌ನಲ್ಲಿ ಕಂಡು ಬಂದ ನ್ಯೂನತೆ:–

2015–16ನೇ ಸಾಲಿನಲ್ಲಿ ಅಲಹಾದ್ ಬ್ಯಾಂಕ್ ಮಂಡ್ಯ ಶಾಖೆ ಮಂಡ್ಯ ಉಳಿತಾಯ ಖಾತೆ ಸಂ.20564617308ರ ಖಾತೆಗೆ ವಿವಿಧ ಬಾಬ್ತುಗಳಿಂದ ಬ್ಯಾಂಕಿಗೆ ಹಣ ಕಟ್ಟುವ (ಕಟ್ಟಿರುವ) ಚಲನ್‌ಗಳನ್ನು ಬ್ಯಾಂಕಿನ ಶೀಟ್‌ಗೆ ಪರಿಶೀಲಿಸಲಾಗಿ ಶ್ರೀ.ಹೆಚ್.ಎಲ್.ಶಿವಲಿಂಗಮ್ಮ, ಮಂಡ್ಯರವರಿಂದ ಹಣ ಕಟ್ಟುವ ಚಲನ್ ನಂ.10153 ದಿ:14–5–2015ರಲ್ಲಿ ರೂ.2480/–ಗಳನ್ನು ಈ ಖಾತೆಗೆ ಜಮಾ ಮಾಡಿರುತ್ತಾರೆ. ಆದರೆ ಬ್ಯಾಂಕ್ ಶೀಟ್‌ನಲ್ಲಿ ಜಮಾ ಆಗಿರುವುದನ್ನು ಪರಿಶೀಲಿಸಲಾಗಿ ಆ ದಿನಾಂಕ ರೂ.2410/–ಗಳು ಮಾತ್ರ ಜಮಾ ಆಗಿರುತ್ತದೆ. ವ್ಯತ್ಯಾಸ ರೂ.70/–ಗಳು ಜಮಾ ಆಗಿಲ್ಲದಿರುವುದರಿಂದ ವಿಚಾರಣಾ ಪತ್ರ ಸಂಖ್ಯೆ:9ನ್ನು ದಿನಾಂಕ:29–6–2016ರಲ್ಲಿ ನೀಡಿ ಇದಕ್ಕೆ ಲಿಖಿತ ವಿವರಣೆ (ಉತ್ತರ) ನೀಡುವಂತೆ ಕೋರಲಾಗಿದೆ. ಇದಕ್ಕೆ ಈವರೆವಿಗೂ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಹಾಗೂ ಈ ಮೊತ್ತವನ್ನು ಸರಿಪಡಿಸಿರುವುದಿಲ್ಲ. ವಿವರಣೆ ನೀಡಿ ಈ ವ್ಯತ್ಯಾಸ ಮೊತ್ತವನ್ನು ಸರಿಪಡಿಸಿ ಹಾಜರುಪಡಿಸಲು ಸೂಚಿಸಿದೆ.

10)ನಿವೇಶನ ನೊಂದಾಣಿ ಅರ್ಜಿ ದಾಸ್ತಾನು ಬಗ್ಗೆ:–

ದಿನಾಂಕ:– 23–06–2016 ರಂದು ನಿವೇಶನ ನೊಂದಾಣಿ ಅರ್ಜಿ ದಾಸ್ತಾನು ವಹಿ ಮತ್ತು ಅರ್ಜಿ ನಮೂನೆಗಳನ್ನು ಭೌತಿಕವಾಗಿ ಹಾಜರುಪಡಿಸಿರುವುದಿಲ್ಲ. ಇದಕ್ಕೆ ವಿಚಾರಣಾ ಪತ್ರವನ್ನು ನೀಡಲಾಗಿದೆ.

11)ನಿವೇಶನ ಅರ್ಜಿ ದಾಸ್ತಾನು

ದಿನಾಂಕ:– 23–06–2016 ರಂದು ನಿವೇಶನ ಅರ್ಜಿ ದಾಸ್ತಾನು ವಹಿ ಮತ್ತು ಅರ್ಜಿಗಳನ್ನು ಭೌತಿಕವಾಗಿ ಹಾಜರುಪಡಿಸಿರುವುದಿಲ್ಲ. ಇದಕ್ಕೆ ವಿಚಾರಣಾ ಪತ್ರವನ್ನು ನೀಡಲಾಗಿದೆ.

12)ಆಯವ್ಯಯ ವಿವರ:–

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ ಪ್ರಕರಣ 43ರ ಪ್ರಕಾರ ಆಯವ್ಯಯವನ್ನು ಫೆಬ್ರವರಿ 1ನೇ ದಿನಾಂಕದ ಒಳಗಾಗಿ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. 2015–16ನೇ ಸಾಲಿನ ಆಯವ್ಯಯವನ್ನು ತಯಾರಿಸಿ ಪ್ರಾಧಿಕಾರದ ಸಭೆಯ ದಿನಾಂಕ:27–06–2015 ನಿರ್ಣಯ ಸಂಖ್ಯೆ 03 ರಂತೆ ಅನುಮೋದಿಸಿ, ಜಿಲ್ಲಾಧಿಕಾರಿಗಳು ಮಂಡ್ಯರವರಿಗೆ ಪತ್ರ ಸಂಖ್ಯೆ: ಮನಪ್ರಾ/ಸಿಬ್ಬಂದಿ/ಆಯವ್ಯಯ20–15–2016

ದಿನಾಂಕ: 08–07–2015 ರಲ್ಲಿ ಮಂಜೂರಾತಿಗಾಗಿ ಸಲ್ಲಿಸಿರುತ್ತಾರೆ.

	(ಲಕ್ಷಗಳಲ್ಲಿ)		(ಲಕ್ಷಗಳಲ್ಲಿ)
ನಿರೀಕ್ಷಿತ ಆದಾಯ	**2094.29**	ವಾಸ್ತವಿಕ ಆದಾಯ	**264.97**
ನಿರೀಕ್ಷಿತ ಖರ್ಚು	**1433.81**	ವಾಸ್ತವಿಕ ಖರ್ಚು	**71.93**
ಉಳಿತಾಯ		ಉಳಿತಾಯ	

ನಿರೀಕ್ಷಿತ ಆದಾಯ	**2094.29**
ವಾಸ್ತವಿಕ ಆದಾಯ	**264.97**
ವ್ಯತ್ಯಾಸ	**1820.32**

ನಿರೀಕ್ಷಿತ ಖರ್ಚು	**1433.81**
ವಾಸ್ತವಿಕ ಖರ್ಚು	**71.93**
ವ್ಯತ್ಯಾಸ	**1361.88**

ಮೇಲಿನ ಆಯವ್ಯಯವನ್ನು ಪರಿಶೀಲಿಸಲಾಗಿ 2015–16 ನೇ ಸಾಲಿನಲ್ಲಿ ನಿರೀಕ್ಷಿತ ಆದಾಯ ಮತ್ತು ವಾಸ್ತವಿಕ ಆದಾಯಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಅದೇ ರೀತಿ ನಿರೀಕ್ಷಿತ ವಾಸ್ತವಿಕ ವೆಚ್ಚಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಆಯವ್ಯಯ ಕೈಪಿಡಿಯ ಸಂಪುಟ 1 ರ ಅನುಚ್ಛೇದ 11 ಮತ್ತು 180 ರಂತೆ ಗುರಿ ಸಾಧನೆಗೆ

ಅತ್ಯಂತ ಸಮೀಪದ ಅಂದಾಜು ತಯಾರಿಸಲು ನಿರ್ದೇಶನವಿದ್ದು. ಈ ನಿಯಮವನ್ನು ಪಾಲಿಸಿರುವುದಿಲ್ಲ. ಇನ್ನು ಮುಂದೆ ಆಯವ್ಯಯವನ್ನು ತಯಾರಿಸುವಾಗ ಮೇಲ್ಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

12ಎ)ಆರ್ಥಿಕ ಪರಿಸ್ಥಿತಿ:–

ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯ 2015–16ನೇ ಸಾಲಿನ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತಿದೆ.ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 42 (1) ರನ್ವಯ ಪ್ರಸಕ್ತ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.

01–04–2015ಕ್ಕೆ ಪ್ರಾರಂಭ ಶಿಲ್ಕು	4142444
2015–16ನೇ ಸಾಲಿನ ಸ್ವೀಕೃತಿ	26497484
ಜುಮ್ಲಾ	30639928
2015–16ನೇ ಸಾಲಿನ ವೆಚ್ಚ	7192558
31–03–2016ಕ್ಕೆ ಆಖೈರು ಶಿಲ್ಕು	23447370

ವಿವರವಾದ ಆರ್ಥಿಕ ಪರಿಸ್ಥಿತಿಯನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

13)ವರ್ಗೀಕೃತ ಜಮ ಮತ್ತು ಖರ್ಚಿನ ವಹಿಯ ಬಗ್ಗೆ:–

ಪ್ರಸಕ್ತ ಸಾಲಿಗೆ ಜಮಾ ಮತ್ತು ಖರ್ಚಿನ ವರ್ಗೀಕೃತ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ನಿರ್ವಹಿಸಲು ಸೂಚಿಸಿದೆ. ಲೆಕ್ಕಪರಿಶೋಧನಾ ವೇಳೆಯಲ್ಲಿ ದೊರೆತ ಮಾಹಿತಿಯಂತೆ ವಾರ್ಷಿಕ ಜಮಾ ಮತ್ತು ಖರ್ಚಿನ ವಿವರವನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

14)ಸಾಲದ ಬಗ್ಗೆ:–

ಪ್ರಸಕ್ತ ಸಾಲಿನಲ್ಲಿ ಸಾಲದ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿರ್ವಹಿಸಲು ಸೂಚಿಸಿದೆ. 2015–16ನೇ ಸಾಲಿನಲ್ಲಿ ಯಾವುದೇ ಸಾಲದ ವ್ಯವಹಾರ ಇರುವುದಿಲ್ಲ ಎಂದು ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:1ಕ್ಕೆ ವಿವರಣೆಯನ್ನು ನೀಡಿರುತ್ತಾರೆ.

15) ಠೇವಣಿಗಳ ಬಗ್ಗೆ:–

ಪ್ರಸಕ್ತ ಸಾಲಿನಲ್ಲಿ ಠೇವಣಿ ವಹಿಯನ್ನು ನಿರ್ವಹಿಸಿರುವುದಿಲ್ಲ. ನಿರ್ವಹಿಸಲು ಸೂಚಿಸಿದೆ. ಲೆಕ್ಕ ಪರಿಶೋಧನಾ ಸಮಯದಲ್ಲಿ ದೊರೆತ ಮಾಹಿತಿಯಂತೆ ಪ್ರಸಕ್ತ ಸಾಲಿನಲ್ಲಿ ಠೇವಣಿಗಳ ವ್ಯವಹಾರವು ಈ ಕೆಳಕಂಡಂತಿದೆ.

ಪ್ರಾರಂಭ ಶಿಲ್ಕು	**966650**
ಪ್ರಸಕ್ತ ಸಾಲಿನಲ್ಲಿ ಹೊಂದಾಣಿಕೆ	**–**
ಒಟ್ಟು	**966650**
ಪ್ರಸಕ್ತ ಸಾಲಿನಲ್ಲಿ ಮರು ಪಾವತಿ	**364461**
ಅಂತಿಮ ಶಿಲ್ಕು	**602189**

16)ನಿವೇಶನ ಹಂಚಿಕೆ ಠೇವಣಿ ವಿವರಗಳು:–

ದಿನಾಂಕ:31–03–2016ಕ್ಕೆ ಬಾಕಿ ಇರುವ ವಿವಿಧ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಪಾವತಿಗಾಗಿ ಬಾಕಿ ಇರುವ ಠೇವಣಿ ಬಾಬ್ತು ರೂ.1350865/– ಗಳಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಅರ್ಜಿಗಳ ಸಂಖ್ಯೆ	ನಿವೇಶನ ಅಳತೆ (ಮೀಟರ್‌ಗಳಲ್ಲಿ)	ಒಟ್ಟು ಮೊತ್ತ
1	**123**	**6*9**	**133115**
2	**124**	**9*12**	**477950**
3	**50**	**12*18**	**532800**
4	**09**	**18*24**	**207000**
ಒಟ್ಟು	**306**		**1350865**

ಮೇಲಿನ ಠೇವಣಿ ಮೊತ್ತ 2002ರಲ್ಲಿ ಫಲಾನುಭವಿಗಳು ಪ್ರಾರಂಭಿಕ ಠೇವಣಿಯಾಗಿ ಪಾವತಿಸಿದ್ದು, ನಿವೇಶನ ಹಂಚಿಕೆಯಾಗದೇ ಇರುವ ಪ್ರಕರಣಗಳಿಗೆ ವಾಪಸ್ಸು ನೀಡಬೇಕಾಗಿರುತ್ತದೆ.

17)ಹೂಡಿಕೆಗಳು:–

ಪ್ರಸಕ್ತ ಸಾಲಿನಲ್ಲಿ ಹೂಡಿಕೆಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಹೂಡಿಕೆಗಳ ವಹಿ ನಿರ್ವಹಿಸದೇ ಇರುವುದರಿಂದ, ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ ಹೂಡಿಕೆ ಮಾಡಿದ ಕೆಲವು ಹೂಡಿಕೆಗಳ ವಿವರ ಲೆಕ್ಕಪರಿಶೋಧನೆಗೆ ಲಭ್ಯವಾಗದೇ, ಕಚೇರಿ ಕಡತವನ್ನು ಪರಿಶೀಲಿಸಿ, ಬ್ಯಾಂಕಿನ ಅಧಿಕಾರಿಗಳನ್ನು ಸಂಪರ್ಕಿಸಿ ಈ ಬಗ್ಗೆ ಮಾಹಿತಿಯನ್ನು ಪಡೆಯಲಾಗಿರುತ್ತದೆ. ಇನ್ನು ಮುಂದೆ ಈ ರೀತಿಯ ತೊಂದರೆಗಳಿಗೆ ಅವಕಾಶ ನೀಡದ'ೇ ಹೂಡಿಕೆ ವಹಿಯನ್ನು ನಿರ್ವಹಿಸಲು ಸೂಚಿಸಿದೆ. ದಿನಾಂಕ:2015–2016 ರಂತೆ ಹೂಡಿಕೆಗಳ ವ್ಯವಹಾರವು ಈ ಮುಂದಿನಂತಿರುತ್ತದೆ.

1–4–2015ಕ್ಕೆ ಪ್ರಾರಂಭ ಶಿಲ್ಕು	63767816
2015–16ನೇ ಸಾಲಿನ ಹೂಡಿಕೆ (ನವೀಕರಣ ಸೇರಿ)	6734438
ಜುಮ್ಲಾ	70502254
2015–16ನೇ ಸಾಲಿನ ಮರು ಹೂಡಿಕೆ/ ನಗದೀಕರಣ	–
31–3–2016ಕ್ಕೆ ಅಂತಿಮ ಶಿಲ್ಕು	70502254

ಹೂಡಿಕೆ ಪತ್ರಗಳನ್ನು ಪರಿಶೀಲಿಸಿದಾಗ ಹೂಡಿಕೆಗಳ ಮೇಲಿನ ಬಡ್ಡಿ ದರ ಶೇ.6.60 ರಿಂದ ಶೇ.7.75 ರವರೆಗೆ ನೀಡಿರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ '15'ರಲ್ಲಿ ಹೆಚ್ಚಿನ ಬಡ್ಡಿ ದೊರೆಯುವ ಬ್ಯಾಂಕ್‌ಗಳಲ್ಲಿ ನಿಯೋಜಿಸುವಂತೆ ಸೂಚಿಸಲಾಗಿತ್ತು. ಆದರೆ ಸದರಿ ಸಾಲಿನಲ್ಲಿಯೂ ಹೆಚ್ಚಿನ ಬಡ್ಡಿ ಇಲ್ಲದೇ ಹಳೇ ದರದಲ್ಲಿಯೇ ಹೂಡಿಕೆ ತೊಡಗಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಇದರಿಂದ ಬರುವ ಹೆಚ್ಚಿನ ಬಡ್ಡಿಯ ಹಣದ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಈ ಕೂಡಲೇ ಬ್ಯಾಂಕಿನ ಅಧಿಕಾರಿಗಳನ್ನು ಸಂಪರ್ಕಿಸಿ ಮೇಲಿನ ಬಡ್ಡಿ ದರ ಗರಿಷ್ಟ ದೊರೆಯುವ ಸಂದರ್ಭದ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ಅಗತ್ಯ ಕ್ರಮವಹಿಸಲು ಸೂಚಿಸಿದೆ. ಸದರಿ ಹೂಡಿಕೆಗಳನ್ನು ಬ್ಯಾಂಕ್‌ನ ಅಧಿಕಾರಿಗಳನ್ನು ಲೆಕ್ಕಪರಿಶೋಧನಾ ತಂಡ ಖುದ್ದು ಸಂಪರ್ಕಿಸಿ, ಮೇಲ್ಕಂಡ ಹೂಡಿಕೆಗಳು ಇನ್ನೂ ಚಾಲ್ತಿಯಲ್ಲಿರವ ಬಗ್ಗೆ ದೃಢೀಕರಣ ಪತ್ರ ಪಡೆಯಲಾಗಿದೆ.

ಒಟ್ಟು ರೂ. 70502254/–ಗಳ ಮೊತ್ತ ಹೂಡಿಕೆ ಮಾಡಿರುತ್ತಾರೆ. ಬಾಂಡ್‌ಗಳ ವಿವರವನ್ನು ಅನುಬಂಧ–4–ರಲ್ಲಿ ನೀಡಿದೆ.

18)2012–13 ನೇ ಸಾಲಿನಲ್ಲಿ ಠೇವಣಿ ಹಣ ದುರುಪಯೋಗವಾಗಿದ್ದು, ದುರುಪಯೋಗದ ಹಣವನ್ನು ವಸೂಲಾತಿಗೆ ಕ್ರಮಕೈಗೊಂಡಿರುವ ಬಗ್ಗೆ.

2012–13 ನೇ ಸಾಲಿನಲ್ಲಿ ಲೆಕ್ಕತಪಾಸಣಾ ಸಮಯದಲ್ಲಿ ರೂ ಐದು ಕೋಟಿ ಠೇವಣಿಯ ಮೊತ್ತವನ್ನು(ರೂ.5,00,00,000/–) ಹಾಗೂ ಬಡ್ಡಿ ರೂ 778767/–ಗಳು ಒಟ್ಟು ಸೇರಿ ರೂ 5,07,78,767/– ಗಳ ದುರುಪಯೋಗವಾಗಿದ್ದು, ದೃಢಪಟ್ಟಿದ್ದು, ಸದರಿ ಹಣ ವಸೂಲಾತಿಗೆ ಕ್ರಮಕೈಗೊಂಡಿರುವ ಬಗ್ಗೆ ಹಿಂದಿನ ಸಾಲಿನ ಕಂಡಿಕೆ ಸಂಖ್ಯೆ:17 ರಲ್ಲಿ ವಸೂಲಾತಿಗೆ ಕ್ರಮವಹಿಸುವಂತೆ, ಸೂಚಿಸಲಾಗಿತ್ತು.

ಸದರಿ ಪ್ರಕರಣವನ್ನು ಸಿ.ಬಿ.ಐ ರವರು ಪರಿಶೀಲನೆ ಮಾಡುತ್ತಿದ್ದು, ಪ್ರಕರಣದ ತನಿಖೆಯು ಯಾವ ಹಂತದಲ್ಲಿದೆ ಎಂಬ ಮಾಹಿತಿಯನ್ನು ಹಾಗೂ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:08/16–17 ದಿ:29–06–2016 ರಂದು ನೀಡಿದ್ದು, ಮೇಲಿನ ಸಿ.ಬಿ.ಐ ರವರ ವರದಿಯನುಸಾರ ತುರ್ತು ಕ್ರಮಕೈಗೊಂಡು ವಸೂಲಾತಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

9) ಮುಂಗಡಗಳು:–

ಪ್ರಸಕ್ತ ಸಾಲಿನಲ್ಲಿ ಮುಂಗಡಗಳ ವಹಿ ನಿರ್ವಹಿಸಿರುವುದಿಲ್ಲ. ನಿರ್ವಹಿಸಲು ಸೂಚಿಸಿದೆ. 2015–16ನೇ ಸಾಲಿನಲ್ಲಿ ಮುಂಗಡ ವ್ಯವಹಾರ ವಿವರ ಈ ಕೆಳಕಂಡಂತಿರುತ್ತದೆ.

ವಿವರ	ಇತರೆ ಮುಂಗಡ	ಹಬ್ಬದ ಮುಂಗಡ	ಒಟ್ಟು
01–04–2015ಕ್ಕೆ ಪ್ರಾರಂಭ ಶಿಲ್ಕು	**–**	**35000**	**35000**
2015–16ನೇ ಸಾಲಿನಲ್ಲಿ ನೀಡಿದ ಮುಂಗಡ	**–**	**–**	**–**
ಒಟ್ಟು	**–**	**35000**	**35000**
2015–16ನೇ ಸಾಲಿನಲ್ಲಿ ಹೊಂದಾಣಿಕೆ	**–**	**35000**	**35000**
31–03–2016ಕ್ಕೆ ಬಾಕಿ	**–**	**–**	**–**

19ಎ)ನಗದು ಪುಸ್ತಕ ನಿರ್ವಹಣೆಯ ಬಗ್ಗೆ:–

2015–16 ನೇ ಸಾಲಿಗೆ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಕಚೇರಿಯ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.

1. **ಪ್ರಾಧಿಕಾರ ಕಛೇರಿಯಲ್ಲಿ ಮಾಹೆವಾರು ಜಮಾ ಮತ್ತು ಖರ್ಚಿನ ವಿವರಗಳಿಗೆ ಸಂಬಂಧಿಸಿದ ನಗದು ಪುಸ್ತಕವನ್ನು ನಿರ್ವಹಿಸಿರುತ್ತಾರೆ. ಆದರೆ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 328 ಮತ್ತು 329 (i) ರಿಂದ (viii) ರಂತೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ.**
2. **ಪ್ರತಿ ಮಾಹೆಯ ಅಂತ್ಯದಲ್ಲಿ ನಗದಾಗದೇ ಉಳಿದಿರುವ ಧನಾದೇಶ ವಿವರಗಳನ್ನು ನಮೂದಿಸಿರುವುದಿಲ್ಲ.**
3. **ಮಾಹೆಯ ಅಂತ್ಯಕ್ಕೆ ಬಾಕಿ ಇರುವ ಶಿಲ್ಕಿನೊಂದಿಗೆ ಬ್ಯಾಂಕ್ ಪಾಸ್ ಪುಸ್ತಕ/ ಬ್ಯಾಂಕ್ ಪಾಸ್‌ಶೀಟ್ ನೊಂದಿಗಿನ ಶಿಲ್ಕುಗಳಿಗೆ ತಾಳೆ ಮಾಡಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ.**

ಈ ಬಗ್ಗೆ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂ 18ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿ ಸರಿಪಡಿಸಿಕೊಳ್ಳುವಂತೆ ಸೂಚಿಸಿದ್ದರೂ ಕೂಡ ಸರಿಪಡಿಸಿಕೊಳ್ಳದಿರುವುದು ಕಂಡು ಬಂದಿದೆ.

ಮೇಲ್ಕಂಡ ನೂನ್ಯತೆಗಳ ಬಗ್ಗೆ ಸೂಕ್ತ ವಿವರಣೆಯನ್ನು ನೀಡಿ, ನೂನ್ಯತೆಗಳನ್ನು ಸರಿಪಡಿಸಿ, ಆಯುಕ್ತರು ನಗದು ವಹಿಗೆ ಸಹಿಯೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. ಈ ಸಂಬಂಧ ಲೆಕ್ಕವಿಚಾರಣಾ ಪತ್ರ ಸಂಖ್ಯೆ:–06/2016–17 ದಿನಾಂಕ:–29–6–2016ರಂದು ನೀಡಲಾಗಿರುತ್ತದೆ.

20)ಕಂದಾಯ, ಬೇಡಿಕೆ, ವಸೂಲಿ, ಬಾಕಿ (ಡಿಸಿಬಿ) ಬಗ್ಗೆ:–

2015–16ನೇ ಸಾಲಿನಲ್ಲಿ ಈಗಾಗಲೇ ಹಿಂದಿನ ಸಾಲಿನಲ್ಲಿ ಪ್ರಾಧಿಕಾರದಿಂದ ರಚಿಸಿರುವ ಸಾಹುಕಾರ ಚೆನ್ನಯ್ಯ ಬಡಾವಣೆ, ಸಾತನೂರು ಬಡಾವಣೆ, ಹಾಗೂ ವಿವೇಕಾನಂದ ನಗರ ಬಡಾವಣೆಗಳಿಂದ ನಿವೇಶನ ಕಂದಾಯ (ಕರಗಳು ಸೇರಿ)ದ ಬೇಡಿಕೆ, ವಸೂಲಿ, ಬಾಕಿ ವಹಿಯನ್ನು ನಿರ್ವಹಿಸಿ ಹಾಜರುಪಡಿಸದಿರುವುದು ಕಂಡು ಬಂದಿರುತ್ತದೆ. ಆದಾಗ್ಯೂ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಲಭ್ಯವಾದ ಮಾಹಿತಿ ಹಾಗೂ ಪ್ರಾಧಿಕಾರದವರು ನೀಡಲಾದ ಡಿ.ಸಿ.ಬಿ ಪ್ರಕಾರ ವಿವರ ಇಂತಿದೆ.

01–04–2015ಕ್ಕೆ ಪ್ರಾರಂಭ ಶಿಲ್ಕು	**1367515**
2015–16ನೇ ಸಾಲಿನ ಬೇಡಿಕೆ	**1043371**
ಒಟ್ಟು	**2410886**
2015–16ನೇ ಸಾಲಿನಲ್ಲಿ ವಸೂಲಿ	**127596**
31–3–2016ಕ್ಕೆ ಬಾಕಿ	**2283209**

ಬಾಕಿ ಇರುವ ರೂ.2283209/– ಗಳನ್ನು ವಸೂಲಿಸುವ ಬಗ್ಗೆ ವೈಯಕ್ತಿಕ ಗಮನ ಹರಿಸಲು ತಿಳಿಸಿದೆ.

21)ಭಾಗಶಃ ರಶೀತಿ ಪುಸ್ತಕ ಬಗ್ಗೆ:–

ರಶೀತಿ ಪುಸ್ತಕ ಸಂಖ್ಯೆ 20 ಕ್ರ.ಸಂ.1901/09–12–2011 ರಿಂದ 1991/12–10–2012ರವರೆಗೆ ಭಾಗಶಃ ಪರಿಶೀಲಿಸಿದೆ.

2015–16ನೇ ಸಾಲಿನಲ್ಲಿ ರಶೀತಿ ಪುಸ್ತಕವನ್ನು ಉಪಯೋಗಿಸಿರುವುದಿಲ್ಲ. ಈ ಭಾಗಶಃ ರಶೀತಿ ಪುಸ್ತಕವನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

22)ಸ್ಲಂ ಕರಗಳು:–

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಸ್ಲಂ ಕರಗಳನ್ನು ವಸೂಲಿಸಿದ್ದು, ಪ್ರತ್ಯೇಕ ಖಾತೆ ಸಂ:20564617159ರಲ್ಲಿ ಜಮಾ ವಿವರ ಮಾಡಿದ್ದು, ವಿವರ ಈ ಮುಂದಿಂತಿರುತ್ತದೆ.

01–04–2015ಕ್ಕೆ ಪ್ರಾರಂಭ ಶಿಲ್ಕು	**4500**
2015–16ಕ್ಕೆ ಸ್ವೀಕೃತಿ (ಬಡ್ಡಿ ಸೇರಿ)	**183**
ಒಟ್ಟು	**4683**
2015–16ಕ್ಕೆ ಖರ್ಚು	**–**
31–03–2016ಕ್ಕೆ ಆಖೈರು ಶಿಲ್ಕು	**4683**

ಸದರಿ ಸಾಲಿನಲ್ಲಿ 23954/–ಗಳ ಸ್ಲಂ ಕರ ವಸೂಲಿಸಿರುವುದು ಕಂಡು ಬಂದಿದ್ದು, ಮೇಲಿನ ಖಾತೆಗೆ ವರ್ಗಾವಣೆ ಮಾಡಿದಿರುವುದಿಲ್ಲ.

23)ಉಪಕರಗಳು:–

ಸದರಿ ಸಾಲಿಗೆ ಕಂದಾಯ ವಸೂಲಾತಿ ಮೊತ್ತ ರೂ.102900/– ಗಳಾಗಿದ್ದು, ಸದರಿ ಬಾಬ್ತು ಉಪಕರಗಳನ್ನು ವಸೂಲಿಸಿದ ವಿವರ ಈ ಕೆಳಕಂಡಂತಿರುತ್ತದೆ.

ವಿವರಗಳು	ಆರೋಗ್ಯಕರ ಶೇ.15	ಗ್ರಂಥಾಲಯ ಕರ ಶೇ.6	ಭಿಕ್ಷುಕರ ಕರ ಶೇ.3	ಒಟ್ಟು ಶೇ.24
2015–16 ಸಾಲಿನಲ್ಲಿ ಸಂಗ್ರಹ	**15435**	**6174**	**3087**	**24696**

ಶೇ.10ರ ಕಡಿತ (–)	1543	617	309	2469
ಒಟ್ಟು	13892	5557	2778	22227
01–04–2015ಕ್ಕೆ ಪ್ರಾರಂಭ ಶಿಲ್ಕು	441459	29776	88290	559525
ಒಟ್ಟು ಪಾವತಿಸಬೇಕಾದ ಮೊತ್ತ	455351	35333	91068	581752
2015–16ರ ಸಾಲಿನಲ್ಲಿ ಪಾವತಿಸಿರುವ ಮೊತ್ತ	–	–	––	–
31–03–16ಕ್ಕೆ ಆಖೈರು ಅಂತ್ಯಕ್ಕೆ ಬಾಕಿ ಇರುವ ಉಪಕರ	455351	35333	91068	581752

ಬಾಕಿ ಉಳಿದಿರುವ ಉಪಕರಗಳನ್ನು ಸಂಬಂಧಪಟ್ಟ ಇಲಾಖೆ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವಂತೆ ಸೂಚಿಸಿದೆ.

24)ಚರ ಆಸ್ತಿ ಮತ್ತು ಸ್ಥಿರ ಆಸ್ತಿ ವಹಿ ಬಗ್ಗೆ:–

ಸದರಿ ಸಾಲಿನಲ್ಲಿ ಚರ ಮತ್ತು ಸ್ಥಿರಾಸ್ತಿಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಹಿಂದಿನ ಸಾಲಿನ ವರದಿಗಳಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಚರ ಮತ್ತು ಸ್ಥಿರಾಸ್ಥಿಗಳ ವಹಿಯನ್ನು ನಿರ್ವಹಿಸಿ ಅದರ ಮೌಲ್ಯಗಳನ್ನು ದಾಖಲಿಸಿ ಆಯುಕ್ತರಿಂದ ದೃಢೀಕರಿಸಿ ಮುಂದಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸಲು ಸೂಚಿಸಿದೆ.

25)'ರೂಪು ರೇಖಾ ನಕ್ಷೆ' ಅನುಮೋದನೆ ನೀಡಿರುವ ಬಗ್ಗೆ:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ರ ಅನ್ವಯ ಸೂಕ್ತ ಶುಲ್ಕ ವಸೂಲಿಸಿ ಮತ್ತು ಕಾಯ್ದೆಯ ನಿಯಮಾವಳಿಗಳಂತೆ ಸೂಕ್ತ ಷರತ್ತುಗಳನ್ನು ವಿಧಿಸಿ 'ನಗರ ಯೋಜನಾ ಸದಸ್ಯರು' ರೂಪು ರೇಖಾ ನಕ್ಷೆಗಳಿಗೆ ಅನುಮೋದನೆ ನೀಡಿರುವುದು ಕಂಡು ಬಂದಿರುತ್ತದೆ.

ಆದರೆ ಸದರಿ ಸಾಲಿನಲ್ಲಿ ಎಷ್ಟು ಪ್ರಕರಣಗಳನ್ನು ರೂಪು ರೇಖಾ ನಕ್ಷೆ ಅನುಮೋದನೆ ಕೋರಿ ಕಚೇರಿಗೆ ಪಡೆಯಲಾಗಿದೆ ಮತ್ತು ಎಷ್ಟು ಪ್ರಕರಣಗಳಿಗೆ ಹಿಂಬರಹ ನೀಡಿ ಕಳುಹಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ವಿಚಾರಣೆ ಪತ್ರ ಸಂಖ್ಯೆ:03/2016–17 ದಿನಾಂಕ:25–6–2016ನ್ನು ನೀಡಿ ವಿವರ ನೀಡಲು

ಸೂಚಿಸಲಾಗಿ ಸದರಿ ಸಾಲಿನಲ್ಲಿ 40 ಪ್ರಕರಣಗಳಿಗೆ ರೂಪು ರೇಖಾ ನಕ್ಷೆ ಅನುಮೋದನೆ ನೀಡಿರುವುದಾಗಿ ಕಡತಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಲಾಗಿದೆ.

26)"ಅನ್ಯಕ್ರಾಂತ ಮಂಜೂರಾತಿಗೆ ರೇಖಾ ನಕ್ಷೆ ಅನುಮೋದನೆ ಶುಲ್ಕ ಶುಲ್ಕ" ಕಡಿಮೆ ವಸೂಲಿಸಿರುವುದು:–

ಸದರಿ ಸಾಲಿಗೆ ಅನ್ಯಕ್ರಾಂತ ರೇಖಾ ನಕ್ಷೆ ಅನುಮೋದನೆ ನೀಡಿರುವ ಕಡತಗಳನ್ನು ಈ ಕೆಳಕಂಡ ಪ್ರಕರಣಗಳಲ್ಲಿ ಕಡಿಮೆ ಶುಲ್ಕ ವಸೂಲಿಸಿರುವುದು ಕಂಡು ಬಂದಿರುತ್ತದೆ.

ಕ್ರ ಸಂ	ಆಸ್ತಿ ಸಂಖ್ಯೆ (ಸರ್ವೆ ನಂಬರ್)	ಮಾಲೀಕರ ಹೆಸರು	ವಸೂಲಿ ಸಬೇಕಾದ ಶುಲ್ಕ	ವಸೂಲಿಸಿದ ಶುಲ್ಕ	ಬಾಕಿ ವಸೂಲಿಸ ಬೇಕಾದದ್ದು
23/2015–16	195/4ಎ–81	ಸಿದ್ದರಾಜು	11402	11010	392
24/2015–16	195/4ಎ–81	ಹೆಚ್.ಪಿ.ಹರೀಶ್	8223	8025	198
67/2015–16	206/1	ಜಿ.ಜನಾರ್ದನ್	13063	11840	1223
ಒಟ್ಟು			32688	30875	1813

ಮೇಲ್ಕಂಡಂತೆ 03 ಪ್ರಕರಣಗಳಲ್ಲಿ ರೂ.1813/– ಗಳನ್ನು ಕಡಿಮೆ ವಸೂಲಿಸಿದ್ದು, ಈ ಬಗ್ಗೆ ವಿವರ ನೀಡುವಂತೆ ವಿಚಾರಣೆ ಪತ್ರ ಸಂಖ್ಯೆ:07/2016–17ನ್ನು ನೀಡಿ ವಿಷಯ ನಿರ್ವಾಹಕರು ಮತ್ತು ಆಯುಕ್ತರಿಗೆ ತಿಳಿಸಿದ್ದಾಗ್ಯೂ ಯಾವುದೇ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸಂಬಂಧಿಸಿದವರಿಂದ ಬಾಕಿ ಮೊತ್ತವನ್ನು ವಸೂಲಿಸಿ ನಿಧಿಗೆ ಜಮಾ ಮಾಡಿ ವಿವರ ಹಾಜರುಪಡಿಸುವವರೆಗೆ ರೂ.1813/–ಗಳನ್ನು ವಿಷಯ ನಿರ್ವಾಹಕರಾದ ಶ್ರೀ. ನಾಗೇಂದ್ರರವರು ಮತ್ತು ಆಯುಕ್ತರ ಹೊಣೆಗಾರಿಕೆ ಮೇಲೆ ವಸೂಲಾತಿಗೆ ಸೂಚಿಸಿದೆ.

27)ಖಾತೆ ವರ್ಗಾವಣೆ ಮಾಡಿರುವ ಕುರಿತು:–

ಸದರಿ ಸಾಲಿನಲ್ಲಿ 02 ಖಾತೆ ವರ್ಗಾವಣೆ ಪ್ರಕರಣಗಳನ್ನು ನಿರ್ವಹಿಸಿರುವುದಾಗಿ ವಿವರ ಮತ್ತು ಕಡತಗಳನ್ನು ಹಾಜರುಪಡಿಸಿದ್ದು, ಈ ಕೆಳಕಂಡಂತಿದೆ.

1)ಸಹಾಯಕ ಔಷಧ ನಿಯಂತ್ರಕರು, ಮಂಡ್ಯ ರವರಿಗೆ 2015–16ನೇ ಸಾಲಿನಲ್ಲಿ ಹಂಚಿಕೆಯಾದ ಸಿ.ಎ.ನಿವೇಶನ ಸಂಖ್ಯೆ:12 ಬಿ/1 'ಇ' ಬ್ಲಾಕ್ 33*30.42 ಮೀಟರ್ ನಿವೇಶನವನ್ನು ದಿನಾಂಕ:22–02–2016ರಲ್ಲಿ ವರ್ಗಾವಣೆ ಮಾಡಲಾಗಿದೆ.

2)ಪೌರಾಯುಕ್ತರು ನಗರಸಭೆ, ಮಂಡ್ಯ ರವರಿಗೆ "ಬ್ರೈಲ್ ಗ್ರಂಥಾಲಯ" ಸ್ಥಾಪನೆಗಾಗಿ 2013–14ನೇ ಸಾಲಿನಲ್ಲಿ ಹಂಚಿಕೆಯಾದ ಸಿ.ಎ.ನಿವೇಶನ ಸಂಖ್ಯೆ:05/ಡಿ ಯ 42*20 ಮೀಟರ್ ಅಳತೆಯ ನಿವೇಶನವನ್ನು ದಿನಾಂಕ:8–3–2016ರಲ್ಲಿ ಕಂದಾಯ ರೂ.6945/–ಗಳನ್ನು ಪಡೆದು ಖಾತೆ ವರ್ಗಾವಣೆ ಮಾಡಲಾಗಿದೆ.

28)ನಾಗರೀಕ ಸೌಕರ್ಯ ನಿವೇಶನ (ಸಿ.ಎ.ನಿವೇಶನ) ಹಂಚಿಕೆ ಮತ್ತು ಗುತ್ತಿಗೆ ನೀಡಿರುವ ಬಗ್ಗೆ:–

2015–16 ನೇ ಸಾಲಿನಲ್ಲಿ ಮಂಡ್ಯ ನಗರಾಭಿವೃದ್ದಿ ಪ್ರಾಧಿಕಾರ ಕಛೇರಿವತಿಯಿಂದ ವಿವಿಧ ಇಲಾಖೆ ಮತ್ತು ಕಛೇರಿಗಳಿಗೆ ನಾಗರೀಕ ಸೌಕರ್ಯ ನಿವೇಶನ(ಸಿ.ಎ.ನಿವೇಶನ)ಗಳನ್ನು ಹಂಚಿಕೆ ಮತ್ತು ಗುತ್ತಿಗೆ ನೀಡಿರುವುದನ್ನು ಪರಿಶೀಲಿಸಲಾಗಿ ಈ ಕೆಳಕಂಡಂತೆ ವಿವರ ಕಂಡು ಬಂದಿರುತ್ತದೆ

ಕ್ರ.ಸಂ.	ಇಲಾಖೆ/ಕಛೇರಿ ಹೆಸರು	ಸಿ.ಎ.ನಿವೇಶನ ಸಂಖ್ಯೆ	ಅಳತೆ	ನಿವೇಶನ ಮೊತ್ತ	ಚಲನ್ ಸಂಖ್ಯೆ/ದಿನಾಂಕ
1	ಸಹಾಯಕ ಔಷಧಿ ನಿಯಂತ್ರಕರು, ಮಂಡ್ಯ ವೃತ್ತ, ಮಂಡ್ಯ	12ಬಿ/1	100*108ಅಡಿ	2702050/–	92/ 25–11–2015
2	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ ಮಂಡ್ಯ	11ಬಿ/1	180*180 ಅಡಿ	8100000/–	630/ 25–02–2016
3	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ ಮಂಡ್ಯ	4ಜಿ	28*40 ಮೀ	3012800/–	27/ 14–10–2015
4	ಜಿಲ್ಲಾ ಪೋಲಿಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ ಮಂಡ್ಯ	4ಡಿ	80*100 ಅಡಿ	1760000/–	10121/ 23–04–2015
5	ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್,ಮಂಡ್ಯ.	4ಎಫ್	39.70*28ಮೀ	5980000/–	633/ 25–02–2016
6	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮಂಡ್ಯ	12ಸಿ3	100*108 ಅಡಿ	2702100	631/ 25–02–2016
			ಒಟ್ಟು	24256950/–	

29)ನಿವೇಶನ ಕಿಮ್ಮತ್ತು ವಸೂಲಿ ಮಾಡಿರುವ ಬಗ್ಗೆ.

ಸದರಿ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ನ.ಅ.ಇ/357/ಬೆಂ.ರೂ.ಪ್ರಾ/2010/ಬೆಂಗಳೂರು ದಿ:26–11–2010 ರಂತೆ, ನರಹಂತಕ ವೀರಪ್ಪನ್ ಕಾರ್ಯಾಚರಣೆಯಲ್ಲಿ ತೊಡಗಿದ್ದು, ಮೃತರಾದ ಶ್ರೀ ಎಸ್.ಎನ್.ಆನಂದ್ ರವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ ಕೋಂ ಎಸ್.ಎನ್.ಆನಂದ್, ರಾಘವೇಂದ್ರ ನಗರ ಮೈಸೂರುರವರಿಗೆ, 12*9 ಮೀ ಅಳತೆಯ ನಿವೇಶನ ಸಂಖ್ಯೆ:277, ಸಾತನೂರು ಬಡಾವಣೆಯ ನಿವೇಶನ ನಿಯಾಮಾನುಸಾರ ಹಂಚಿಕೆಯಾಗಿದ್ದು, ಸದರಿಯವರಿಂದ ನಿವೇಶನ ಕಿಮ್ಮತ್ತು, ರೂ 252675/– ಗಳನ್ನು ಚಲನ್ ಸಂಖ್ಯೆ:10193 ದಿನಾಂಕ:18–06–2015 ರಲ್ಲಿ ಪಡೆದು ಪ್ರಾಧಿಕಾರದ ನಿಧಿಗೆ ಜಮಾ ಮಾಡಿರುವ ವಿವರ ಕಂಡು ಬಂದಿರುತ್ತದೆ.

30)ಖಾಸಗೀ ವ್ಯಕ್ತಿ/ಬಡಾವಣೆಗಳ ವಿನ್ಯಾಸ ನಕ್ಷೆ ಅನುಮೋದಿಸಿರುವ ಕುರಿತು:–

ಸದರಿ ಸಾಲಿನಲ್ಲಿ ನಗರಾಭಿವೃದ್ದಿ ಪ್ರಾಧಿಕಾರವು 39 ಖಾಸಗೀ ವ್ಯಕ್ತಿಗಳಿಗೆ ಐಕ ವಿನ್ಯಾಸ ನಕ್ಷೆಯನ್ನು ಮತ್ತು ಒಂದು ಬಹು ವಿನ್ಯಾಸ ನಕ್ಷೆ (ಬಡಾವಣೆ)ಯನ್ನು ಅನುಮೋದಿಸಿರುವುದು ಕಂಡು ಬಂದಿರುತ್ತದೆ. ಸದರಿಯವರಿಂದ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ನಕ್ಷೆ ಶುಲ್ಕ, ವೆಬ್ ಶುಲ್ಕ, ಸ್ಲಂಸೆಸ್ ಮತ್ತು ಕರ ಸಂರಕ್ಷಣಾ ಶುಲ್ಕ ಒಟ್ಟು ರೂ.646692/–ಗಳನ್ನು ವಸೂಲಿಸಿ ಪ್ರಾಧಿಕಾರದ ನಿಧಿಗೆ ಜಮಾ ಮಾಡಿರುವುದು ಕಂಡು ಬಂದಿರುತ್ತದೆ. ಅನುಬಂಧ–5 ರಲ್ಲಿ ವಿವರ ಲಗತ್ತಿಸಿದೆ.

ಅನುಬಂಧ–5 ರ ಕ್ರಮಸಂಖ್ಯೆ 8 ರಲ್ಲಿ ಶ್ರೀ.ಬಿ.ಕೆ.ರಾಮರಾವ್, ಸುಮ ಬಿ.ಕೆ, ಚಂದ್ರಶೇಖರ್, ಪ್ರಭಾ ರವರಿಗೆ ಸೇರಿದ ಸರ್ವೆ ನಂಬರ್ 776/2 ಮತ್ತು 778ರ ಮಂಡ್ಯ ಗ್ರಾಮದ ಎ ಎಕರೆ 17 ಗುಂಟೆ ವಿಸೀರ್ಣಕ್ಕೆ ಬು ವಿನ್ಯಾಸ ನಕ್ಷೆ (ಬಡಾವಣೆ) ಅನುಮೋದನೆಯನ್ನು ದಿನಾಂಕ:26–7–2015ರ ಪ್ರಾಧಿಕಾರದ ಸಭೆ ತೀರ್ಮಾನದಂತೆ ಮತ್ತು ಪ್ರಾಧಿಕಾರದ ಆದೇಶ ಸಂಖ್ಯೆ:ಮಂ.ನ.ಪ್ರಾ/ವಿ.ನ.ಅ/ವ.ವಿ/ ಮಂಡ್ಯ/09/2015–16 ರಲ್ಲಿ ದಿನಾಂಕ:28–7–2015 ರಲ್ಲಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಜಮೀನಿನ ಒಟ್ಟು 9813.49 ಚ.ಮೀ ವೀಸ್ತೀರ್ಣದ ಪೈಕಿ ಶೇ.12.75 (1251.33 ಚ.ಮೀ) ಉದ್ಯಾನಕ್ಕಾಗಿ, ಶೇ.32.29 (3168.92 ಚ.ಮೀ) ರಸ್ತೆಗಾಗಿ ಕಾಯ್ದಿರಿಸಿ, ರಸ್ತೆ ಮತ್ತು ಉದ್ಯಾನಕ್ಕಾಗಿ ಕಾಯ್ದಿರಿಸಿದ ಪ್ರದೇಶವನ್ನು ಪ್ರಾಧಿಕಾರಕ್ಕೆ ದಿನಾಂಕ:11–8–2015ರಂದು ಸಿ.ಡಿ.ನಂಬರ್ ಎಂ.ಡಿ.ವೈ.ಡಿ 182ರಲ್ಲಿ ಉಪ ನೊಂದಣಾಧಿಕಾರಿಗಳು, ಮಂಡ್ಯ ರವರಲ್ಲಿ ನೊಂದಣಿ ಮಾಡಿ ಪರಿತ್ಯಾಜನ ಪತ್ರ'ದ ಮೂಲಕ ಪುಕ್ಕಟೆಯಾಗಿ ಬಿಟ್ಟುಕೊಟ್ಟಿರುವುದು ಕಂಡು ಬಂದಿರುತ್ತದೆ. ಉಳಿದಂತೆ ಸದರಿ ಬಡಾವಣೆಯಿಂದ ಒಟ್ಟು 47 ನಿವೇಶನಗಳಿಗೆ ಬಹು ವಿನ್ಯಾಸ ನಕ್ಷಗೆ ಅನುಮೋದನೆ ನೀಡಿರುವುದು ಕಂಡು ಬಂದಿದೆ.

ಮೇಲ್ಕಂಡಂತೆ ಬಹು ವಿನ್ಯಾಸ ನಕ್ಷೆ ಅನುಮೋದನೆ ಶುಲ್ಕ ರೂ.301107/– ಗಳನ್ನು ದಿನಾಂಕ:14–7–2015ರಲ್ಲಿ ಅಲಹಬಾದ್ ಬ್ಯಾಂಕ್ ಮಂಡ್ಯದಲ್ಲಿ ಪ್ರಾಧಿಕಾರದ ನಿಧಿಗೆ ಜಮಾ ಮಾಡಿರುವುದು ಕಂಡು ಬಂದಿರುತ್ತದೆ.

31)ಪ್ರಾರಂಭಿಕ ಪ್ರಮಾಣ ಪತ್ರ ನೀಡಿಕೆ ಬಗ್ಗೆ:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(2)ರ ಪ್ರಕಾರ ನಗರ ಯೋಜನಾ ಸದಸ್ಯರು ಸಾರ್ವಜನಿಕರು ತಮ್ಮ ನಿವೇಶನದಲ್ಲಿ ಕಟ್ಟಡ ಕಟ್ಟುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದಾಗ, ಪ್ರಸ್ತಾವನೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ, ವಲಯ ನಿಯಮಾವಳಿಗಳಿಗನುಗುಣವಾಗಿ ಸದರಿ ಪ್ರಸ್ತಾವನೆಯು ಇರುವ ಬಗ್ಗೆ ಪರಿಶೀಲಿಸಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ಸ್ಥಳೀಯ ಸಂಸ್ಥೆಗಳ ಮೂಲಕ ನೀಡಿರುವುದು ಕಂಡು ಬಂದಿರುತ್ತದೆ.

ಆದರೆ ಸದರಿ ಸಾಲಿನಲ್ಲಿ 'ಪ್ರಾರಂಭಿಕ ಪ್ರಮಾಣ ಪತ್ರ' ಕೋರಿ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ. ಅವುಗಳಲ್ಲಿ ಎಷ್ಟು ಪ್ರಸ್ತಾವನೆಗಳಿಗೆ ಪ್ರಮಾಣ ಪತ್ರ ನೀಡಲಾಗಿದೆ. ಎಷ್ಟು ಪ್ರಸ್ತಾವನೆಗಳಿಗೆ ಹಿಂಬರಹ ನೀಡಲಾಗಿದೆ ಎಂಬ ವಿವರವನ್ನು ಹಾಜರುಪಡಿಸಿರುವುದಿಲ್ಲ.

32)ಶ್ರೇಣಿ ವಹಿ ಬಗ್ಗೆ:–

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯ 2015–16ನೇ ಸಾಲಿನಲ್ಲಿ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ	ಅಧಿಕಾರಿ/ಸಿಬ್ಬಂದಿಗಳ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಆಯುಕ್ತರು	01	01	–
2	ನಗರ ಯೋಜನಾ ಸದಸ್ಯರು	01	–	01
3	ಸಹಾಯಕ ಕಾರ್ಯಪಾಲಕ ಅಭಿಯಂತರರು	01	–	01
4	ಸಹಾಯಕ ಅಭಿಯಂತರರು	01	01	–
5	ನಗರ ಯೋಜಕರು	01	01	–
6	ಸಹಾಯಕ ನಗರ ಯೋಜಕರು	01	–	01
7	ಕಿರಿಯ ಅಭಿಯಂತರರು	01	–	01
8	ಡ್ರಾಫ್ಟ್‌ಮನ್	01	–	01
9	ಲೆಕ್ಕಾಧೀಕ್ಷಕರು	01	01	–
10	ಪ್ರಥಮ ದರ್ಜೆ ಸಹಾಯಕರು	01	01	–

11	ಪ್ರಥಮ ದರ್ಜೆ ಭೂ ಮಾಪಕರು	01	–	01
12	ರಾಜಸ್ವ ನಿರೀಕ್ಷಕರು	01	–	01
13	ಶೀಘ್ರಲಿಪಿಗಾರರು	01	–	01
14	ದ್ವಿತೀಯ ದರ್ಜೆ ಸಹಾಯಕರು	03	02	01
15	ವರ್ಕ್ ಇನ್ಸ್‌ಪೆಕ್ಟರ್	01	–	01
16	ಬೆರಳಚ್ಚುಗಾರರು	01	–	01
17	ವಾಹನ ಚಾಲಕರು	02	01	01
	ಡಿ ಗ್ರೂಪ್	05	05	–
	ಒಟ್ಟು	25	13	12

33)ನೌಕರರಿಂದ ಕಟಾಯಿಸಲಾದ ವೃತ್ತಿತೆರಿಗೆ, ಜೀವವಿಮೆ, ಕೆ.ಜಿ.ಐ.ಡಿ, ಗುಂಪುವಿಮೆ, ಜಿ.ಪಿ.ಎಫ್ ಇತರೆ ಕಟಾವಣೆಗಳನ್ನು ನಿಗದಿತ ಮಾಹೆಯಲ್ಲಿ ಸಂಬಂಧಿಸಿದ ಸಂಸ್ಥೆಗಳಿಗೆ ಪಾವತಿಸುವ ಬಗ್ಗೆ:–

